ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 14 ಸಂಚಿಕೆ 11 ನವೆಂಬರ್ 2017 ರೂ.25

## ಅನಿಸಿಕೆಗಳು

### ಗುರೂಜಿ ಕೃಷ್ಣಾನಂದ

ಅನು: ಚಂಪ

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಫೆಬ್ರುವರಿ 1998ರ ಸಂಚಿಕೆ)

ಪ್ರಳಯವೆಂದರೆ ವಿನಾಶವಲ್ಲ. ಅದು ಪ್ರಜ್ಞೆಯ ಆರೋಹಣದ ಒಂದು ಪ್ರಕ್ರಿಯೆ, ಕೇವಲ ಕೆಲವರಲ್ಲಿ ಮಾತ್ರವಲ್ಲ, ಎಲ್ಲರಲ್ಲೂ; ಎಲ್ಲ ಜೀವಿಗಳಲ್ಲೂ. ಈ ಸತ್ಯದ ಅರಿವು ಎಲ್ಲೆಡೆಗೆ ವ್ಯಾಪಿಸುತ್ತಿದೆ. ಜ್ಯೋತಿಕಾರ್ಯಕರ್ತರಿಗೂ ಇದರ ಸ್ಪಷ್ಟವಾದ ಅರಿವಿದೆ ಮತ್ತು ತಮ್ಮ ಅಧ್ಯಾತ್ಮದ ಅಭಿವೃದ್ಧಿಗಾಗಿ ಅವರ ಬಳಿ ಬರುವವರೆಲ್ಲರೂ ಇದನ್ನು ಅರ್ಥಮಾಡಿಕೊಳ್ಳುತ್ತಾರೆ. ಇದುವರೆಗೂ ತಿಳಿದಿರದ ಸತ್ಯಗಳಾದ ಸೂಕ್ಷ್ಮಲೋಕಗಳು, ಸೂಕ್ಷ್ಮವ್ಯಕ್ತಿಗಳು ಮತ್ತು ಚೈತನ್ಯಗಳು ಹಾಗೂ ನಮ್ಮ ಜೀವನದಲ್ಲಿ ಅವುಗಳ ಪಾತ್ರ ಮತ್ತು ಪ್ರಾಮುಖ್ಯತೆಯ ಬಗ್ಗೆ ಜನರಿಗೆ ತಿಳಿಹೇಳುವ ಅದ್ಭುತ ಕೆಲಸವನ್ನು ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ ಸೂಕ್ಷ್ಮಲೋಕಗಳಿಂದ ಚೈತನ್ಯಗಳನ್ನು ಕೆಳತಂದು ಅವುಗಳನ್ನು ಸಕಾರಾತ್ಮಕ ತರಂಗಗಳಿರುವ ಕ್ಷೇತ್ರಗಳನ್ನು ಸೃಷ್ಟಿಸಲು ಮತ್ತು ಅನೇಕ ಸುಪ್ತ ಚೈತನ್ಯಗಳನ್ನು ಸಕ್ರಿಯಗೊಳಿಸಲು ಬಳಸಿಕೊಳ್ಳುತ್ತಿದ್ದಾರೆ.

ಜ್ಯೋತಿಕಾರ್ಯ ಒಂದೇ. ಜ್ಯೋತಿಕಾರ್ಯಕರ್ತರು ವಿಭಿನ್ನ ಸಂಸ್ಕೃತಿ ಮತ್ತು ಧಾರ್ಮಿಕ ಹಿನ್ನೆಲೆಗಳಲ್ಲಿ ಜೀವಿಸುತ್ತಿದ್ದರೂ, ಉನ್ನತ ಮಟ್ಟಗಳಲ್ಲಿ ಭೇಟಿಯಾಗುತ್ತಿರುತ್ತಾರೆ, ಅವರೆಲ್ಲರೂ ಒಂದಾಗಿರುತ್ತಾರೆ. ಎಲ್ಲ ಪ್ರತ್ಯೇಕತೆಗಳು ಮತ್ತು ತಡೆಗೋಡೆಗಳಿರುವುದು ಮಾನವ ಮಟ್ಟದಲ್ಲಿ ಮಾತ್ರ, ಏಕೆಂದರೆ ಅವು ಮಾನವ ನಿರ್ಮಿತ.

ಜ್ಯೋತಿಕಾರ್ಯಕ್ಕೆ ಯಾರು ಬೇಕಾದರೂ ಸೇರಿಕೊಳ್ಳಬಹುದು. ಅದಕ್ಕೆ ವಿಶೇಷ ತರಬೇತಿಯೇನೂ ಬೇಕಾಗಿಲ್ಲ. ಈ ಕೆಲಸಕ್ಕೆ ಸೇರಿಕೊಳ್ಳುವ ಮೊದಲು ಮಾನವತೆ ಮತ್ತು ಜೀವನದೆಡೆಗೆ ಪ್ರೀತಿ, ನಾವೆಲ್ಲರೂ ಒಂದೇ ಮೂಲವಾದ ಭಗವಂತನಿಂದ ಬಂದಿದ್ದೇವೆ ಎಂಬ ಅರಿವು, ಇವೆರಡನ್ನೂ ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿರಬೇಕು. ಪೂರ್ವ ಅಥವಾ ಉತ್ತರಕ್ಕೆ ಮುಖ ಮಾಡಿ ಮೌನವಾಗಿ ಕುಳಿತು ಬೆಳಕಿನ ಶ್ವೇತವರ್ಣದ ಕಿರಣಗಳು ಮೇಲಿನಿಂದ ಹರಿದುಬಂದು ನಮ್ಮನ್ನು ಪ್ರವೇಶಿಸಿ ಭುವಿಯ ಎಲ್ಲೆಡೆ ಹರಡುತ್ತ ಶಾಂತಿ ಮತ್ತು ಪ್ರೀತಿಯನ್ನು ತುಂಬುತ್ತಿರುವಂತೆ ಕಲ್ಪಿಸಿಕೊಳ್ಳುವುದು ಒಂದು ಸರಳ ತಂತ್ರ, ಅದನ್ನು ಯಾರಾದರೂ, ಎಲ್ಲಾದರೂ, ಎಷ್ಟು ಹೊತ್ತಿಗಾದರೂ ಕೆಲವು ನಿಮಿಷಗಳವರೆಗೆ, ಸಾಧ್ಯವಾದರೆ ಕೆಲವು ಗಂಟೆಗಳವರೆಗೆ ಅಭ್ಯಾಸ ಮಾಡಬಹುದು.

ನನಗೆ ಇದನ್ನು ವ್ಯಾಪಕವಾಗಿ ಪ್ರಚಾರ ಮಾಡಲು ಅವಕಾಶವಿದ್ದಿದ್ದರೆ ಚೆನ್ನಾಗಿತ್ತು ಎನಿಸುತ್ತದೆ. ಇದು ಉಂಟುಮಾಡುವ ಬೃಹತ್ ಪರಿಣಾಮವನ್ನು ಅರಿತ ಪ್ರತಿಯೊಬ್ಬರೂ ಖಂಡಿತವಾಗಿ ಸೇರಿಕೊಳ್ಳುತ್ತಾರೆ ಎಂಬ ವಿಶ್ವಾಸ ನನಗಿದೆ. ಹೆಚ್ಚು ಜನರು ಸೇರಿದಷ್ಟೂ ಪರಿಣಾಮಗಳು ವೇಗವಾಗಿಯೂ ಪ್ರಬಲವಾಗಿಯೂ ಆಗುತ್ತವೆ.

---

ಮಂಥನವಾದಾಗಲೆಲ್ಲ ಯಾವಾಗಲೂ, ತಡವಾಗಿಯಾದರೂ ಏನೋ ಒಂದು ಒಳ್ಳೆಯದು ಬಂದೇ ಬರುತ್ತದೆ. ಚುನಾವಣೆಗಳನ್ನು ಮಂಥನದ ಪ್ರಕ್ರಿಯೆ ಎಂದು ಭಾವಿಸಬೇಕು. ಅದು ಅಧ್ಯಾತ್ಮದ ಪ್ರಕ್ರಿಯೆ, ಕೇವಲ ರಾಜಕೀಯದ್ದಲ್ಲ. ಈ ಪ್ರಕ್ರಿಯೆಯ ಹಿಂದೆ ಸಾವಿರಾರು ಜನರ ಧ್ಯಾನಗಳು ಮತ್ತು ಪ್ರಾರ್ಥನೆಗಳಿವೆ. ಅದೇ ಭರವಸೆ ಮತ್ತು ಶ್ರೇಯಸ್ಸಿನ ಚಿಹ್ನೆ.

---

ಚಿಕ್ಕ ಹುಡುಗ ವಿರಾಲ್ "ಡೋರ್‌ವೇಸ್ ಟು ಲೈಟ್" ಅನ್ನು ಇಡೀ ರಾತ್ರಿ ಕುಳಿತು ಒಂದೇ ಬಾರಿಗೆ ಓದಿ ಮುಗಿಸಿದ, ಮರುದಿನ ಬೆಳಿಗ್ಗೆ ಅತ್ಯಂತ ಉತ್ಸಾಹದಲ್ಲಿದ್ದ. ಬಿಡುಗಡೆಯಾದ ಮೊದಲ ವಾರ ಅನೇಕರು ಫೋನ್ ಮಾಡಿ ತಮ್ಮ ಮೆಚ್ಚುಗೆ ತಿಳಿಸಿದರು. ಇನ್ನೂ ಅನೇಕರು ತಮ್ಮ ಮೆಚ್ಚುಗೆಯನ್ನು ಪತ್ರದ ಮೂಲಕ ತಿಳಿಸಿದರು. ಎಲ್ಲರೂ ತೋರಿದ ಮುಕ್ತಮನಸ್ಸಿನ ಪ್ರೀತಿಪೂರ್ವಕ ಆಸಕ್ತಿಗೆ ನಾನು ಮಾರುಹೋಗಿದ್ದೇನೆ. ನಾನು ಕೃತಜ್ಞ. ಪುಸ್ತಕವು ಜಗತ್ತಿಗೆ ದೊಡ್ಡ ರೀತಿಯಲ್ಲಿ ಇನ್ನೂ ತಲುಪಬೇಕಾಗಿದೆ, ನಾನು ಪ್ರತಿಕ್ರಿಯೆಗಾಗಿ ಕಾಯುತ್ತಿದ್ದೇನೆ.

---

ಎಂ. ಪಿ. ಪಂಡಿತರನ್ನು ಹತ್ತಿರದಿಂದ ಬಲ್ಲ ಮುಂಬಯಿಯ ಶಾಂತ ಸ್ವಭಾವದ ವಯಸ್ಕರೊಬ್ಬರು ತಪೋನಗರದಲ್ಲಿ ನಮ್ಮೊಂದಿಗೆ ಮೂರೇ ದಿನ ಇದ್ದರು. ಅವರು ಇಲ್ಲಿ ನಡೆಯುತ್ತಿರುವ ಕೆಲಸದ ಬಗ್ಗೆ ಎಷ್ಟು ಆಳವಾಗಿ ಅರ್ಥಮಾಡಿಕೊಂಡಿದ್ದಾರೆ ಮತ್ತು ಎಷ್ಟು ಪ್ರೀತಿಯಿಂದ ಮಾತನಾಡಿದರೆಂದರೆ ಅದರ ಬಗ್ಗೆ ಇಲ್ಲಿರುವ ಜನರೂ ಇನ್ನೂ ಪೂರ್ತಿ ಅರ್ಥಮಾಡಿಕೊಂಡಿಲ್ಲ. ಅರ್ಥ ಮಾಡಿಕೊಳ್ಳಲು, ಅನುಭೂತಿ ತೋರಲು ಮತ್ತು ನೆರವಾಗಲು ಇಲ್ಲೇ ಇರಬೇಕೆಂದೇನಿಲ್ಲ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್, ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್, ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ 6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ, ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**
**ಮಂಗಳವಾರ** (ಮಧ್ಯಾಹ್ನ 11.30 ರಿಂದ 12.30)
ಶ್ರೀ ಮಂಜುನಾಥ ಶಾಸ್ತ್ರಿಯವರ ಮನೆ, ಗಾಂಧಿ ವೃತ್ತ

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ತಪೋನಗರ ನಿವಾಸಿಗಳು ನಂದಿ ಬೆಟ್ಟದ ಪ್ರವಾಸವನ್ನು ಆನಂದಿಸಿದರು

## ಸುದ್ದಿ-ಸೂಚನೆ

- 26-11-2017 ರಂದು ತಪೋನಗರದಲ್ಲಿ ಗುರೂಜಿಯವರ ಮಹಾಸಮಾಧಿ ದಿನದ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ಇದರಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 2-11-2017 ರೊಳಗೆ ಮಾನಸ ಕಚೇರಿಯಲ್ಲಿ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.
- 2018ನೇ ಇಸವಿಯ ಡೆಸ್ಕ್ ಕ್ಯಾಲೆಂಡರ್ ಅನ್ನು ಕೂಡ 26-11-2017ರ ಕಾರ್ಯಕ್ರಮದಲ್ಲಿ ಬಿಡುಗಡೆಮಾಡಲಾಗುವುದು. ಅದನ್ನು ಕೋರಿದವರಿಗೆ ಮಾತ್ರ ಸೀಮಿತ ಸಂಖ್ಯೆಯಲ್ಲಿ ಮುದ್ರಿಸುವುದರಿಂದ, ಆಸಕ್ತ ಸಾಧಕರು ತಮ್ಮ ಪ್ರತಿಗಳನ್ನು ಕಾದಿರಿಸಲು ದಿನಾಂಕ 12-11-2017ರೊಳಗೆ ಮಾನಸ ಆಫೀಸಿನಲ್ಲಿ ನೊಂದಾಯಿಸಬೇಕಾಗಿ ವಿನಂತಿ.
- 14-01-2018ರಂದು ಪ್ರಾರಂಭವಾಗುವ ಶಂಬಲ ಗ್ರೂಪ್‌ನ ಹೊಸ ಬ್ಯಾಚ್‌ಗೆ ಸೇರಬಯಸುವ ಸಾಧಕರು, 31-12-2017 ರೊಳಗೆ ಮಾನಸ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ. ದೂರದಕಲಿಕೆಯ ಸಾಧಕರು ಕೂಡ ಸೇರಬಹುದು. ಈಗಿನ ಶಂಬಲ ಗ್ರೂಪ್ ಸಾಧಕರು ಕೂಡಾ ತಮ್ಮ ನೋಂದಣಿಯನ್ನು ನವೀಕರಿಸಿಕೊಳ್ಳಲು ತಮ್ಮ ಹೆಸರನ್ನು 31-12-2017 ರೊಳಗೆ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಮಾನಸ ಆಫೀಸ್‌ಅನ್ನು ಸಂಪರ್ಕಿಸಬಹುದು.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 04 | ಶನಿ | ಪೂರ್ಣಿಮಾ |
| 11 | ಶನಿ | ಕೃಷ್ಣ ಅಷ್ಟಮಿ |
| 16 | ಗುರು | ಮಾಸ ಶಿವರಾತ್ರಿ |
| 18 | ಶನಿ | ಅಮಾವಾಸ್ಯೆ |
| 23 | ಗುರು | ಗುರೂಜಿಯವರ ಮಹಾಸಮಾಧಿ ದಿನ |
| 26 | ಭಾನು | ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ<br>ಶುಕ್ಲ ಅಷ್ಟಮಿ |
| 28 | ಮಂಗಳ | ಶುಕ್ಲ ದಶಮಿ |

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 12-11-2017 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 19-11-2017 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 26-11-2017 | ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ |

## ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ ಭಾನುವಾರ, 26-11-2017

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಆನೇಕಲ್‌ನಲ್ಲಿ ಕಾರ್ಯಕ್ರಮ

ದಿನಾಂಕ 23-11-2017, ಗುರುವಾರದಂದು ಬೆಳಿಗ್ಗೆ 11.30 ಕ್ಕೆ ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮವನ್ನು ಆಚರಿಸಲಾಗುವುದು.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಲೈಟ್ ಚಾನಲಿಂಗ್ ಸೆಷನ್ ಸಮಯದಲ್ಲಿ, ನಾನು ಸಂತೋಷದಿಂದ ಇದ್ದೆ. ನಾನು ಉಲ್ಲಾಸಗೊಂಡು ಸಮಾಧಾನದ ಅನುಭವ ಪಡೆದುಕೊಂಡೆ. ಪ್ರತಿದಿನ ಓದುವುದಕ್ಕೆ ಕುಳಿತಾಗಲೆಲ್ಲ, ನಾನು ಲೈಟ್ ಚಾನಲಿಂಗ್ ಮಾಡುತ್ತೇನೆ. ಈಗ ನನ್ನ ವಿದ್ಯಾಭ್ಯಾಸದ ಕಡೆಗೆ ಸಂಪೂರ್ಣ ಗಮನ ಕೊಡುವುದಕ್ಕೆ ನನಗೆ ಸಾಧ್ಯವಾಗಿದೆ. ನಾನು ಮನಃಪೂರ್ವಕವಾಗಿ ಲೈಟ್ ಚಾನಲಿಂಗ್ ಟೆಕ್ನಿಕ್‌ಅನ್ನು ಅಭ್ಯಾಸ ಮಾಡುವಾಗ, ನನ್ನ ಎಲ್ಲ ಅವಶ್ಯಕತೆಗಳನ್ನು ಈಡೇರಿಸು ಎಂದು ದೇವರಿಗೆ ಪ್ರಾರ್ಥಿಸುತ್ತೇನೆ, ನನ್ನ ಎಲ್ಲ ಅವಶ್ಯಕತೆಗಳು ಈಡೇರಿವೆ. ಲೈಟ್ ಚಾನಲಿಂಗ್ ಅಭ್ಯಾಸದಿಂದ ಬೆಳಕನ್ನು ಹರಡುವ ಪ್ರತಿಜ್ಞೆ ಮಾಡಬೇಕೆಂದು ಇಚ್ಛಿಸಿದ್ದೇನೆ, ಮತ್ತು ಬೇರೆಯವರಿಗೂ ಲೈಟ್ ಚಾನಲಿಂಗ್ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

– ರಕ್ಷಂದ ಐಮನ್, ಹತ್ತನೆಯ ತರಗತಿ, ಕ್ರೈಸ್ಟ್ ಪಬ್ಲಿಕ್ ಸ್ಕೂಲ್, ಬಿ.ಟಿ.ಎಮ್. ಲೇಔಟ್, ಬೆಂಗಳೂರು

ಪ್ರತಿ ದಿನ 7 ನಿಮಿಷಗಳ ಲೈಟ್ ಚಾನಲಿಂಗ್ ಮಾಡುವುದರಿಂದ ನನ್ನ ಮನಸ್ಸು ಪ್ರಶಾಂತತೆಯಿಂದ ತುಂಬಿರುತ್ತದೆ. ಇಡೀ ಪ್ರಪಂಚಕ್ಕೆ ಬೆಳಕನ್ನು ಹರಡುವುದು ನನಗೆ ಸಂತೋಷ ತಂದಿದೆ. ನನ್ನ ಏಕಾಗ್ರತೆ ಹೆಚ್ಚಾಗಿದೆ, ಮತ್ತು ನಡೆವಳಿಕೆಯು ಸುಧಾರಿಸಿದೆ. ಅಹಂ ಅಥವಾ ಹೊಟ್ಟೆಕಿಚ್ಚು ನನ್ನಲ್ಲಿ ಇಲ್ಲ.

– ಭೂಮಿಕ ಎನ್. ಹತ್ತನೆಯ ತರಗತಿ, ಬಸವೇಶ್ವರ ಹೈ ಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು.

ಲೈಟ್ ಚಾನಲಿಂಗ್ ಟೆಕ್ನಿಕ್ ನನ್ನಲ್ಲಿ ಪ್ರತಿ ದಿನ ಹೊಸತನ್ನು ತರುತ್ತಿದೆ. ಇದನ್ನು ನನ್ನೊಳಗೆ ಅಭಿವೃದ್ಧಿ ಪಡಿಸಿಕೊಂಡು ನನ್ನ ವಿದ್ಯಾಭ್ಯಾಸದಲ್ಲಿ ಅಳವಡಿಕೊಳ್ಳಲು ಇಚ್ಛಿಸುತ್ತೇನೆ. ನನ್ನ ಸುತ್ತ ಮುತ್ತಲಿನಲ್ಲಿ ಶಾಂತಿ ಮತ್ತು ಸ್ವಚ್ಛತೆಯ ಅನುಭವವಾಗುತ್ತಿದೆ.

– ಜಾಹ್ನವಿ ಬಿ., ಹತ್ತನೆಯ ತರಗತಿ, ಬಸವೇಶ್ವರ ಹೈ ಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು

ಲೈಟ್ ಚಾನಲಿಂಗ್ ಒಂದು ಉತ್ತಮ ಟೆಕ್ನಿಕ್ ಆಗಿದೆ. ವಿದ್ಯಾರ್ಥಿಗಳು ಈಗ ಶಿಸ್ತುಬದ್ಧರಾಗಿದ್ದಾರೆ ಮತ್ತು ಕಲಿಕೆಯ ಸಾಮರ್ಥ್ಯ ಹೆಚ್ಚಿದೆ. ಅವರು ಈಗ ಹೆಚ್ಚು ಆತ್ಮ ವಿಶ್ವಾಸಿಗಳಾಗಿದ್ದಾರೆ, ಮತ್ತು ಅವರು ಈಗ ತಪ್ಪುಗಳನ್ನು ಮಾಡುವುದಿಲ್ಲ. ಉಪಾಧ್ಯಾಯರು ಸಹ ಇದರ ಪ್ರಯೋಜನಗಳನ್ನು ಪಡೆದುಕೊಂಡಿದ್ದಾರೆ.

– ಶ್ರೀ ಕೃಷ್ಣಯ್ಯ, ಹೆಡ್‌ಮಾಸ್ಟರ್, ರೋಟರಿ ಬೆಂಗಳೂರು ವಿದ್ಯಾಲಯ, ಬೆಂಗಳೂರು

ಬಹಳ ದಿನಗಳಿಂದ ನಾನು ಲೈಟ್ ಚಾನಲಿಂಗ್ ಟೆಕ್ನಿಕ್ ಅಭ್ಯಾಸ ಮಾಡುತ್ತಿದ್ದೇನೆ. ಇದು ತುಂಬಾ ಸರಳವಾದ ಟೆಕ್ನಿಕ್. ಇದನ್ನು ಯಾರು ಬೇಕಾದರೂ ಅಭ್ಯಾಸ ಮಾಡಿ ಎಲ್ಲ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು. ವ್ಯಕ್ತಿಗಳಿಗೆ, ಕುಟುಂಬದ ಸದಸ್ಯರಿಗೆ, ಸಮೂಹ ತಂಡಗಳಿಗೆ ಮತ್ತು ಪ್ರಪಂಚಕ್ಕೆ ಇದು ತುಂಬಾ ಒಳ್ಳೆಯದು. ಇದನ್ನು ಅಭ್ಯಾಸ ಮಾಡಿ ಮತ್ತು ಬೆಳಕಾಗಿ.

– ಶ್ರೀ ನರಸಿಂಹರಾಜು, ಹೆಡ್‌ಮಾಸ್ಟರ್, ನಮ್ಮೂರ ಸರ್ಕಾರಿ ಮಾದರಿ ಪ್ರಾಥಮಿಕ ಪಾಠಶಾಲೆ, ಅಂದ್ರಹಳ್ಳಿ ಬೆಂಗಳೂರು.

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ಪಾಂಡುರಂಗ**

ಒಬ್ಬ ಗುರು ಯಾವಾಗಲೂ ಶಾಶ್ವತವಾಗಿರುತ್ತಾರೆ. ಗುರುವಿನ ಭೌತಿಕ ಶರೀರ ಅವರ ವ್ಯಕ್ತಿತ್ವವನ್ನು ಅರ್ಥೈಸುವುದಿಲ್ಲ, ಅಂತಿಮವಾಗಿ ಅವರ ಭೌತಿಕ ಶರೀರ ಕಣ್ಮರೆಯಾಗುತ್ತದೆ. ಒಬ್ಬ ಆಧ್ಯಾತ್ಮಿಕ ಮಾಸ್ಟರ್, ಅವರ ಬೋಧನೆಗಳ ಮೂಲಕ ಜೀವಿಸಿರುತ್ತಾರೆ, ಮತ್ತು ಆ ಬೋಧನೆಗಳೇ ಅವರ ಎಲ್ಲ ಅನುಯಾಯಿಗಳಿಗೆ ಮಾರ್ಗದರ್ಶನವಾಗಿರುತ್ತವೆ. ಅವರು ಸ್ಥಾಪಿಸಿ, ಅನುಸರಿಸುವ ಮೌಲ್ಯಾಧಾರಿತ ವ್ಯವಸ್ಥೆಯ ಮೂಲಕ ಜೀವಿಸಿರುತ್ತಾರೆ. ದೇವರನ್ನು ಸೇರಬೇಕಾದ ಕಷ್ಟದ ದಾರಿಯಲ್ಲಿ ನಡೆದಾದ ನಂತರ, ಒಬ್ಬ ಗುರು ಆಧ್ಯಾತ್ಮಿಕ ಮಾರ್ಗವೊಂದನ್ನು ಸ್ಥಾಪಿಸುತ್ತಾರೆ ಮತ್ತು ಅವರೇ ಆ ಮಾರ್ಗವಾಗುತ್ತಾರೆ; ಸಾವಿರಾರು ಜನರಿಗೆ ಸ್ಫೂರ್ತಿಯಾಗುತ್ತಾರೆ. ವಿದ್ಯಾರ್ಥಿಗಳ ಹೃದಯಗಳಲ್ಲಿ, ಮಮತೆಯ ನೆನಪುಗಳಾಗಿ ಮಾತ್ರವಲ್ಲದೆ ಷರತ್ತುರಹಿತ ಪ್ರೀತಿಯಾಗಿ ನೆಲೆಸುತ್ತಾರೆ. ಅವರು ಭೌತಿಕ ಶರೀರ ತ್ಯಜಿಸಿದ ನಂತರವೂ, ಬಹಳ ಕಾಲದವರೆಗೆ ಅವರ ಸಕಾಲಿಕ ಮಾರ್ಗದರ್ಶನ ಮತ್ತು ರಕ್ಷಣೆಯ ಅನುಭವವಾಗುತ್ತದೆ. ಯಾರು ತಮ್ಮ ಆತ್ಮದ ಮೂಲಕ ಗುರೂಜಿಯವರನ್ನು ನೋಡುತ್ತಾರೋ, ಅವರಿಗೆಲ್ಲರಿಗೂ ಗುರೂಜಿಯವರು ಜೀವಿಸಿದ್ದಾರಷ್ಟೇ ಅಲ್ಲ ಅವರೇ ಜೀವವಾಗಿದ್ದಾರೆ.

ತಪೋನಗರ ನಿವಾಸಿಗಳಿಗೆ, ಕೇವಲ ಒಂದುವರೆ ಘಂಟೆಯ ಪ್ರಯಾಣದಷ್ಟು ದೂರವಿರುವ ನಂದಿ ಬೆಟ್ಟ, ಗುರೂಜಿಯವರೊಂದಿಗೆ ಹೋಗುತ್ತಿದ್ದ ತುಂಬಾ ಪ್ರಿಯವಾದ ಪ್ರವಾಸಿ ತಾಣ. ಅಕ್ಟೋಬರ್ ತಿಂಗಳಿನಲ್ಲಿ ಈ ಪವಿತ್ರ ಬೆಟ್ಟಕ್ಕೆ ಒಂದು ಪ್ರವಾಸ ಏರ್ಪಡಿಸಲಾಗಿತ್ತು. ನಿವಾಸಿಗಳ ಸಮಿತಿ ಕೆಲವು ವಾರಗಳ ಹಿಂದೆಯೇ ಅತಿ ಸೂಕ್ಷ್ಮತೆಯಿಂದ ಶ್ರಮವಹಿಸಿ ತಯಾರಿ ನಡೆಸಿದ್ದರು. ಸಾರಿಗೆ ವ್ಯವಸ್ಥೆ, ಆಹಾರ ವ್ಯವಸ್ಥೆ, ಬೇಕಾದಂಥ ಚಾಪೆ ಎಲ್ಲವನ್ನೂ ಸಮರ್ಪಕವಾಗಿ ಆಯೋಜಿಸಿದ್ದರು. ಇದರ ಪರಿಣಾಮವಾಗಿ ಸುಮಾರು ಎಪ್ಪತ್ತು ತಪೋನಗರ ನಿವಾಸಿಗಳಿಗೆ ಅದೊಂದು ಮರೆಯಲಾಗದ ದಿನವಾಯಿತು. ನಂದಿ ಬೆಟ್ಟದಲ್ಲಿ ಕೋತಿಗಳು ತಮ್ಮ ತುಂಟಾಟ ಆಡಲು ಪ್ರಾರಂಭಿಸುತ್ತಿದ್ದಂತೆ, ಕೆಲವು ನಿವಾಸಿಗಳು ಕೋತಿಗಳು ಪ್ರವೇಶಿಸದಂತೆ ಕಾವಲುಗಾರರಾಗಿ ನಿಂತರು. ಪ್ರಕೃತಿ ಮಾತೆಯೂ ಮಳೆ ಇಲ್ಲದ ಆಹ್ಲಾದಕರ ವಾತಾವರಣ ಸೃಷ್ಟಿಸಿದ್ದಳು. ದೊಡ್ಡ ತಂಡವಿದ್ದರೂ ಈ ನಂದಿ ಬೆಟ್ಟ ಪ್ರವಾಸ ಬಹಳ ಯಶಸ್ವಿಯಾಯಿತು. ಸ್ವತಃ ಗುರೂಜಿಯವರ ದೈವಿಕ ಉಪಸ್ಥಿತಿ ಮತ್ತು ಅವರ ಆಶೀರ್ವಾದಕ್ಕೆ ಸಾಕ್ಷಿಯಾಗಿತ್ತು ಈ ಪ್ರವಾಸ. ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

## ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಆಗಸ್ಟ್ 2005

ನಾವಿಲ್ಲಿರುವುದು ಬೆಳೆಯುವುದಕ್ಕಾಗಿ, ನಮ್ಮನ್ನು, ನಮ್ಮ ಸುತ್ತಲಿನ ಬದುಕನ್ನು ಮತ್ತು ಪ್ರಪಂಚವನ್ನು ಉತ್ತಮಪಡಿಸುವುದಕ್ಕಾಗಿ. ಅದಕ್ಕಾಗಿಯೇ ನಾವು, ನಾವೇನನ್ನು ಮಾಡಬೇಕು ಏನನ್ನು ಮಾಡಬಾರದು ಮುಂತಾದ ಎಷ್ಟೊಂದು ವಿಷಯಗಳನ್ನು ಅರ್ಥವಾಡಿ ಕೊಳ್ಳಬೇಕಾಗಿರುವುದು. ಬೇರೆಯವರಲ್ಲಿ ತಪ್ಪನ್ನು ಹುಡುಕುವುದು ಬೇಡ, ಬಹುತೇಕ ಸಮಯಗಳಲ್ಲಿ ಹಾಗೆ ಮಾಡುವ ಪ್ರವೃತ್ತಿ ನಮ್ಮಲ್ಲಿದೆ. ಅದು ಸಹಜವಲ್ಲದಿದ್ದರೂ ಅದೊಂದು ಪ್ರವೃತ್ತಿ. ಋಷಿಗಳು ನಮ್ಮಲ್ಲಿ ತಪ್ಪನ್ನು ಹುಡುಕುವುದಿಲ್ಲ. ನೀವು ತಪ್ಪು ಹುಡುಕಿದಾಗ ತೀರ್ಪು ನೀಡುತ್ತಿದ್ದೀರಿ ಎಂದರ್ಥ. "ಈ ವ್ಯಕ್ತಿ ಇಂತಹ ತಪ್ಪನ್ನು ಮಾಡಿದ್ದಾನೆ, ಇದು ಸರಿಯಲ್ಲ," ಎಂದು ಹೇಳುತ್ತೇವೆ. ಒಂದು ದೃಷ್ಟಿಕೋನದಿಂದ ನೋಡಿದಾಗ ಕೆಲವು ವಿಷಯಗಳು ತಪ್ಪೆಂದು ಗೋಚರಿಸುತ್ತವೆ ಎಂಬ ಸತ್ಯದ ಅರಿವಿನಲ್ಲಿ ನಾವಿರಬೇಕು. ಮತ್ತೊಂದು ಮಟ್ಟದಿಂದ ಗಮನಿಸಿದಾಗ ಅದೇ ವಿಷಯವು ಸಂಪೂರ್ಣವಾಗಿ ವಿಭಿನ್ನರೀತಿಯಲ್ಲಿ ಕಾಣುತ್ತದೆ. ನಮ್ಮ ದೃಷ್ಟಿಕೋನದಿಂದ ನೋಡುವುದರಿಂದ ತಪ್ಪುಗಳು ಕಾಣುತ್ತವೆ, ಆದ್ದರಿಂದ ಬದುಕನ್ನು ಋಷಿಗಳ ದೃಷ್ಟಿಕೋನದಿಂದ ನೋಡೋಣ. ಆಗ ಸಂಘರ್ಷಗಳು ಮತ್ತು ತಪ್ಪುಗಳು ಎಲ್ಲಿರುತ್ತವೆ? ಮತ್ತೊಂದು ಅಂಶವಿದೆ, "ಇತರರು ಮತ್ತು ಋಷಿಗಳು ನಮ್ಮಲ್ಲಿ ತಪ್ಪನ್ನು ಹುಡುಕಲು ಪ್ರಯತ್ನಿಸಿದರೆ ಹೇಗಿರುತ್ತದೆ?" ಬೇರೆಯವರಲ್ಲಿ ತಪ್ಪುಗಳನ್ನು ಹುಡುಕುತ್ತಿದ್ದರೆ ನಾವು ಒಂದು ಮಟ್ಟದಲ್ಲಿಯೇ ಸಿಕ್ಕಿಕೊಳ್ಳುತ್ತೇವೆ. ಸಹಜವಾಗಿಯೇ, ಇಷ್ಟಪಡದಿರುವ ಮತ್ತು ಗೌರವಿಸದಿರುವ ಪ್ರವೃತ್ತಿ ನಮ್ಮಲ್ಲಿ ಬೆಳೆಯಲಾರಂಭಿಸುತ್ತದೆ, ಇದು ಒಳ್ಳೆಯದಲ್ಲ. ಎಲ್ಲರನ್ನೂ ನಮ್ಮ ತೆಕ್ಕೆಯೊಳಗೆ ತಂದುಕೊಳ್ಳುವ ನಮ್ಮ ಪ್ರಯತ್ನಕ್ಕೆ ಇದು ಸಹಾಯಕವಲ್ಲ. ವ್ಯಕ್ತಿಯೊಬ್ಬನು ತಪ್ಪು ಮಾಡಿದ್ದಾನೆಂದು ಯೋಚಿಸಲು ಪ್ರಾರಂಭಿಸಿದಾಗ ನಾವು ಅಂತರವನ್ನು ಸೃಷ್ಟಿಸುತ್ತೇವೆ, ಅವನನ್ನು ನಮ್ಮ ಹೃದಯದಿಂದ ಆಚೆ ಇಡುತ್ತೇವೆ, ನಾವಿಲ್ಲಿರುವುದು ಇಡೀ ಸೃಷ್ಟಿಯನ್ನೇ ನಮ್ಮ ಹೃದಯದಲ್ಲಿಟ್ಟುಕೊಳ್ಳಲು.

ಈ ವಿಶ್ವದಲ್ಲಿ ಜೀವಶಕ್ತಿಯಿದೆ (life-force), ಅದನ್ನು 'ಪ್ರಾಣ' ಎಂದು ಋಷಿಗಳು ಕರೆದರು. ಆದರೆ ಅದೇಕೋ ಸೂರ್ಯನಿಂದ ಬರುವ ಚೈತನ್ಯಕ್ಕೆ ನಮ್ಮಲ್ಲಿ ಪ್ರಾಣ ಎಂಬ ಹೆಸರು ಬಳಕೆಯಲ್ಲಿದೆ. ಆದ್ದರಿಂದ ಇವೆರಡರಲ್ಲೂ ವ್ಯತ್ಯಾಸವನ್ನು ಕಾಣಲು ಇದನ್ನು 'ಮಹಾಪ್ರಾಣ' ಎಂದು ಕರೆಯೋಣ. ಹೆಸರು ಮುಖ್ಯವೇನಲ್ಲ. ಇದರ ಬಗ್ಗೆ ಸ್ವಲ್ಪ ವಿಷಯಗಳನ್ನು ತಿಳಿದುಕೊಳ್ಳೋಣ.

ಪ್ರಾಣಾಯಾಮದ ಅಭ್ಯಾಸದಿಂದ ನಾವು ಹೆಚ್ಚಿನ ಪ್ರಮಾಣದಲ್ಲಿ ಪ್ರಾಣವನ್ನು ಪಡೆಯುತ್ತೇವೆ. ನಮ್ಮ ಭೌತಿಕ ದೇಹಕ್ಕೆ ಈ ಪ್ರಾಣವನ್ನು ಪಡೆಯುತ್ತೇವೆ. ನಮ್ಮ ಭೌತಿಕ ದೇಹಕ್ಕೆ ಈ ಪ್ರಾಣ ಬೇಕಾಗಿದೆ. ಮಹಾಪ್ರಾಣವು ಸೂಕ್ಷ್ಮ ದೇಹಕ್ಕೆ ಬೇಕಾಗಿದೆ. ಭೌತಿಕ ದೇಹಕ್ಕೆ ಪ್ರಾಣಬೇಕು; ಮನಸ್ಸು ಮತ್ತು ಬುದ್ಧಿಗೆ ಮಹಾಪ್ರಾಣ ಬೇಕು. ಆದ್ದರಿಂದ ಪ್ರಾಣಾಯಾಮವು ಭೌತಿಕದೇಹಕ್ಕೆ ಸಹಾಯಕವಾದರೆ, ಧ್ಯಾನವು ಮಹಾಪ್ರಾಣವನ್ನು ಪಡೆದುಕೊಳ್ಳಲು ಸಹಾಯ ಮಾಡುತ್ತದೆ. ಇದು ಹೇಗೆಂದರೆ, ನಮ್ಮ ಮನಸ್ಸು ಮತ್ತು ಬುದ್ಧಿಯನ್ನು ಕ್ಷೋಭೆಯಿಂದ ದೂರವಿಟ್ಟು ಮೌನಗೊಳಿಸಿದರೆ ಈ ಮಹಾಪ್ರಾಣ ನಮ್ಮೊಳಗೆ ಪ್ರವೇಶಿಸುತ್ತದೆ. ಅದಕ್ಕಾಗಿಯೇ ನಾವು ಧ್ಯಾನಮಾಡುತ್ತೇವೆ. ಆದ್ದರಿಂದ ಪ್ರಾಣಾಯಾಮವು ಭೌತಿಕ ದೇಹಕ್ಕೆ ಸಹಾಯಮಾಡಿದರೆ, ಮೌನವು ಜೀವಶಕ್ತಿಯು ನಮ್ಮೊಳಗೆ ಪ್ರವೇಶಿಸಲು ಸಹಾಯ ಮಾಡುತ್ತದೆ. ಧ್ಯಾನ ಮಾಡುವುದರಿಂದ ನಾವು ಮಾನಸಿಕವಾಗಿ ಮತ್ತು ಬೌದ್ಧಿಕವಾಗಿ ಬಲಗೊಳ್ಳುತ್ತೇವೆ. ಇದು ಬಹು ಮುಖ್ಯ ವಿಷಯವಾಗಿದೆ.

ಭಾವನೆ ಮತ್ತು ಆಲೋಚನೆಗಳೆರಡರಲ್ಲಿ ಯಾವುದು ಬಲಶಾಲಿ? ನಾವು ವಿಚಾರ ಶಕ್ತಿಯ ಬಗ್ಗೆ ಹೆಚ್ಚು ಮಾತನಾಡುವುದರಿಂದ ಆಲೋಚನೆಯೇ ಹೆಚ್ಚು ಬಲಶಾಲಿ ಎಂಬ ಅನಿಸಿಕೆ ನನ್ನಲ್ಲಿತ್ತು. ಆದರೆ ಅದು ಹಾಗಲ್ಲವೆಂದು ಒಂದು ದಿನ ಋಷಿಗಳು ನನಗೆ ಹೇಳಿದರು. ಭಾವನೆಗಳೇ ಹೆಚ್ಚು ಬಲಶಾಲಿ. ಇದನ್ನು ನಮ್ಮದೇ ಸ್ವಂತ ಬದುಕಿನಲ್ಲಿ ನಾವು ಗಮನಿಸಬಹುದು. ಅತ್ಯಂತ ಭಾವುಕರಾಗಿದ್ದಾಗ, ನಾವು ನಮ್ಮ ವಿಚಾರಶಕ್ತಿಯನ್ನು ಕಳೆದುಕೊಳ್ಳುತ್ತೇವೆ. ಆದ್ದರಿಂದ ಭಾವನೆಯು ಆಲೋಚನೆಯನ್ನು ಮೀರಿಸುತ್ತದೆ. ಈ ಭಾವನೆಗಳನ್ನು ನಿಯಂತ್ರಿಸಬೇಕು, ಶುದ್ಧಗೊಳಿಸಬೇಕು. ಭಾವನೆಗಳನ್ನು ಶುದ್ಧ ಮಾಡುವುದೇ ರಾಜಯೋಗ. ಯೋಗದ ಪಠ್ಯ ಪುಸ್ತಕಗಳನ್ನು ಓದಿ ನಾವು ರಾಜಯೋಗವನ್ನು ಅರ್ಥಮಾಡಿಕೊಳ್ಳಬೇಕು. ಮನಸ್ಸಿನ ಮೇಲೆ ಹಿಡಿತ ಸಾಧಿಸುವುದಕ್ಕೆ ಸಹಾಯಮಾಡುವ ಯೋಗಾಭ್ಯಾಸವೇ ರಾಜಯೋಗ. ಇದರ ಅರ್ಥವನ್ನು ನಾವು ಉತ್ತಮ ಪಡಿಸಬಹುದು. 'ಮನಸ್ಸಿನ ಮೇಲೆ ಹಿಡಿತ ಸಾಧಿಸುವ,' ಅನ್ನುವುದರ ಬದಲಿಗೆ ಮುಖ್ಯವಾಗಿ, 'ಭಾವನೆಗಳ ಮೇಲೆ ಹಿಡಿತ ಸಾಧಿಸುವುದಕ್ಕೆ ಸಹಾಯಮಾಡುವ,' ಯೋಗಾಭ್ಯಾಸವೇ ರಾಜಯೋಗ ಎಂದು ನಾವು ಹೇಳಬಹುದು. ನಮ್ಮ ಭಾವನೆಗಳು ಶುದ್ಧಗೊಂಡರೆ ನಮ್ಮ ಬದುಕೇ ಶುದ್ಧಗೊಳ್ಳುತ್ತದೆ, ಆಗ ತಾನಾಗಿಯೇ ಬೇರೆಯವರೊಂದಿಗೆ ಮತ್ತು ಪ್ರಪಂಚದೊಂದಿಗೆ ನಾವು ಮಾಡುವ ವ್ಯವಹಾರದಲ್ಲಿ ಬದಲಾವಣೆಯಾಗುತ್ತದೆ. ನಮ್ಮ ವ್ಯವಹರಿಸುವ ಕ್ರಿಯೆಯ ಗುಣಮಟ್ಟ ಹೆಚ್ಚಾಗುತ್ತದೆ. ನಾವು ಬೆಳೆಯುವುದು ಹೀಗೇ. ಇದನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಂಡಿರುವುದರಿಂದ ನನಗೆ ಸಂತೋಷವಾಗಿದೆ.

ಆಗಸ್ಟ್ 28ರಂದು, ಪ್ರಶ್ನೋತ್ತರದ ಸಂಕಲನದ ಪುಸ್ತಕವೊಂದನ್ನು ಹೊರತರುತ್ತಿದ್ದೇವೆ. ಅದನ್ನು, ಪರಿಶೀಲಿಸುವ ಮತ್ತು ತಿದ್ದುವ ಕೆಲಸ ಮಾಡುತ್ತಿದ್ದಾಗ ಉತ್ತರಗಳಲ್ಲಿರುವ ಸ್ಪಷ್ಟತೆ ಮತ್ತು ಸಂಪೂರ್ಣತೆಯು ನನ್ನ ಗಮನಕ್ಕೆ ಬಂದಿತು. ನಾನು ಇನ್ನೊಂದು ವಿಷಯವನ್ನೂ ಗಮನಿಸಿದೆ. ಪ್ರಶ್ನೆಯೊಂದು ಇದ್ದರೆ, ಸಾಮಾನ್ಯವಾಗಿ ಉತ್ತರವನ್ನು ವಿವರಿಸುತ್ತಾ ಹೋಗುವ ಪ್ರವೃತ್ತಿಯಿರುತ್ತದೆ. ಉತ್ತರಿಸುವುದಷ್ಟೇ ಅಲ್ಲದೆ ವ್ಯಾಖ್ಯಾನಿಸುವ ಪ್ರವೃತ್ತಿಯೂ ಇರುತ್ತದೆ. ಆಗಲೇ ಉತ್ತರಗಳು ಅತೀ ಉದ್ದವಾಗುವುದು ಮತ್ತು ಕೆಲವೊಮ್ಮೆ, ವಿಡಂಬನಾತ್ಮಕವಾಗಿ, ಈ ವ್ಯಾಖ್ಯಾನದೊಳಗೆ ಮತ್ತು ವಿವರಣೆಯೊಳಗೆ ಉತ್ತರವೇ ಕಳೆದುಹೋಗುತ್ತದೆ! ಇಲ್ಲಿ, ಉದ್ದದ ವಿವರಣೆಯ ಪ್ರವೃತ್ತಿಯಿಂದ ನಾವು ದೂರವಿರುವುದು ನನಗೆ ಸಂತೋಷ ತಂದಿದೆ. ನನ್ನ ಗುರು ಹೇಳಿದ ಮಾತನ್ನು ನನಗೆ ಮರೆಯಲಾಗುವುದಿಲ್ಲ, ಅವರು ಹೇಳಿದರು "ಯಾರಾದರೂ ಸಮಯವೆಷ್ಟು ಎಂದು ಕೇಳಿದಾಗ, ಸಮಯವಷ್ಟನ್ನೇ ಹೇಳಿ; ಕೈಗಡಿಯಾರದ ತಯಾರಕರು ಇತ್ಯಾದಿಯ ವಿವರ ಬೇಕಾಗಿಲ್ಲ!" ಸಾಮಾನ್ಯವಾಗಿ ಆಗುವುದೇನೆಂದರೆ, ಮುಖ್ಯ ವಿಷಯವನ್ನೇ ಮರೆತು ಬೇರೆಲ್ಲ ವಿಷಯಗಳನ್ನು ವಿವರಿಸುತ್ತೇವೆ!

ವಿಷಯಗಳನ್ನು ಇಲ್ಲಿನ ಜನರು ಅರ್ಥ ಮಾಡಿಕೊಂಡಿರುವುದು ನನಗೆ ಸಂತೋಷ ತಂದಿದೆ, ವಾರದಿಂದ ವಾರಕ್ಕೆ ಅಲ್ಲದಿದ್ದರೂ, ತಿಂಗಳಿಂದ ತಿಂಗಳಿಗೆ ಹೆಚ್ಚು ಹೆಚ್ಚು ಅರಿತುಕೊಳ್ಳುವ ಮತ್ತು ಮುಂದುವರೆಯುತ್ತಾ ಹೋಗುವ ಪ್ರಾಮಾಣಿಕ ಇಚ್ಛೆ, ಪ್ರಾಮಾಣಿಕ ಬಯಕೆ ಯಾವುದೋ ಒಂದು ರೀತಿಯಲ್ಲಿ ನನ್ನ ಅನುಭವಕ್ಕೆ ಬರುತ್ತಿದೆ. ಎಂತಹ ಮನಃಪೂರ್ವಕ ಬಯಕೆ, ಅದನ್ನು ನಾನು ಅರಿಯಬಲ್ಲೆ. 1988ರಿಂದ ನಿಮ್ಮೆದುರು ಕುಳಿತು ನನ್ನ ಬದುಕನ್ನು ಕಳೆದದ್ದು ನಿಜವಾಗಿಯೂ ಪ್ರಯೋಜಕಾರಿಯಾಗಿದೆ, ನಿಮ್ಮಿಂದಾಗಿಯೇ ನಾನಿಲ್ಲಿ ಕುಳಿತಿದ್ದೇನೆ ಎನ್ನುವಂತಿದೆ! ಅಲ್ಲದಿದ್ದರೆ ನನ್ನ ಬದುಕಿಗೇ ಅರ್ಥವಿರುತ್ತಿರಲಿಲ್ಲವೇನೋ. ಇದು ನನ್ನ ಮನಸ್ಸನ್ನು ತಟ್ಟಿದೆ. ನನಗೆ ಬಹಳ ಸಂತೋಷವಾಗಿದೆ. ■

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

10–9–2017

'ಹೋಮೇಜ್ ಟು ದ ಸನ್' ಎಂಬ ಪುಸ್ತಕವನ್ನು ನಾನು ಓದುತ್ತಿದ್ದೇನೆ. ಇದು ಡಸ್ಕೋಲಸ್ ಅವರ ಬಗ್ಗೆ. ಅವರು ಸೈಪ್ರಸ್‌ನಲ್ಲಿದ್ದ ಒಬ್ಬ ಮಾಸ್ಟರ್. ಗುರೂಜಿಯವರು ಅವರ ಬಗ್ಗೆ ಮತ್ತು ಅವರು ಬರೆದ 'ದ ಮ್ಯಾಗಸ್ ಆಫ್ ಸ್ಟ್ರೊವೋಲೋಸ್' ಎಂಬ ಪುಸ್ತಕದ ಬಗ್ಗೆ ತಿಳಿಸಿದ್ದರು. ಅನೇಕರು ಈ ಪುಸ್ತಕವನ್ನು ಓದಿರಬಹುದು. ಸ್ಟ್ರೊವೋಲೋಸ್ ಒಂದು ಸ್ಥಳದ ಹೆಸರು, ಈ ವ್ಯಕ್ತಿ ಡಸ್ಕೋಲಸ್ ಎಂದು ಪರಿಚಿತರಾಗಿದ್ದಾರೆ, ಗ್ರೀಸ್ ಭಾಷೆಯಲ್ಲಿ ಅದರ ಅರ್ಥ ಮಾಸ್ಟರ್ ಎಂದು. ಆ ಪುಸ್ತಕದಲ್ಲಿರುವ ಕೆಲವು ವಿಷಯಗಳಿಂದ ನಾನು ಆಶ್ಚರ್ಯಚಕಿತನಾಗಿದ್ದೇನೆ. ಕೆಲವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ಮಾನವಕುಲವು ಇನ್ನೂ ಹೆಚ್ಚಾಗಿ ವಿಕಾಸಗೊಂಡಾಗ, ಉಸಿರಾಡಲು ನಮಗೆ ಆಮ್ಲಜನಕದ ಅವಶ್ಯಕತೆಯಿರುವುದಿಲ್ಲವೆಂದು ಅವರು ಪುಸ್ತಕದಲ್ಲಿ ಹೇಳಿದ್ದಾರೆ. ಭವಿಷ್ಯದಲ್ಲಿ ನಾವು ಬೆಳಕಿನ ಶರೀರವನ್ನು ಪಡೆದಾಗ, ನಮ್ಮ ಉಳಿವಿಗಾಗಿ ಆಮ್ಲಜನಕ ಅಥವ ಆಹಾರದ ಅವಶ್ಯಕತೆಯಿರುವುದಿಲ್ಲವೆಂದು ಗುರೂಜಿಯವರು ಸಹ ಹೇಳಿದ್ದರು. ಎಲ್ಲೆಲ್ಲೂ ಇರುವ ಬೆಳಕು ಮತ್ತು ಪ್ರಾಣದಿಂದ ನಾವು ಬದುಕುತ್ತೇವೆ.

ಭೂಮಿಯ ಆಳಕ್ಕೆ ಮತ್ತು ಸೂರ್ಯನ ಮಧ್ಯಭಾಗಕ್ಕೆ ಕ್ಷಣಾರ್ಧದಲ್ಲಿ ನಾವು ಪಯಣಿಸಲು ಸಾಧ್ಯವಾಗುತ್ತದೆಯೆಂದೂ ಈ ಮಾಸ್ಟರ್ ಹೇಳಿದ್ದಾರೆ. ಬೆಂಕಿ ಅಥವ ನೀರಿನಂತಹ ಬೇರಾವುದೇ ಧಾತು ನಮ್ಮ ಮೇಲೆ ಪರಿಣಾಮ ಬೀರುವುದಿಲ್ಲ.

ಇದು ಸ್ವಾರಸ್ಯಕರವಾದ ವಿಷಯ. ಈ ಭೂಮಿಯ ಮೇಲಷ್ಟೇ ಅಲ್ಲ ನಮ್ಮ ಸೌರ ಮಂಡಲದ ಎಲ್ಲ ಗ್ರಹಗಳಲ್ಲೂ ಜೀವರಾಶಿಯಿದೆ ಎಂದು ಅವರು ಹೇಳುತ್ತಾರೆ. ಆದರೆ ಅಲ್ಲಿನ ಜೀವರಾಶಿಯೇ ಬೇರೆ ರೀತಿಯದ್ದು, ಬಹುಶಃ ಅಲ್ಲಿನ ಜನರು ಬೇರೆ ತರಂಗದಲ್ಲಿ ಕಂಪಿಸಬಹುದು, ಆದ್ದರಿಂದ ಅವರನ್ನು ನಾವು ಕಾಣಲಾಗುವುದಿಲ್ಲ. ಅಲ್ಲಿ ಮಾಸ್ಟರ್‌ಗಳಿದ್ದಾರೆ; ಸೂಕ್ಷ್ಮ ಮಟ್ಟದಲ್ಲಿ ನಮ್ಮನ್ನು ಅವರು ಮಾರ್ಗದರ್ಶಿಸಬಹುದು, ಕೆಲವೊಮ್ಮೆ ನಮ್ಮನ್ನು ಮಾರ್ಗದರ್ಶಿಸಲು ಮಾನವರಾಗಿ ಜನಿಸುತ್ತಾರೆ. ಬೇರೆ ಗ್ರಹಗಳ ಆತ್ಮಗಳು, ಇಲ್ಲಿನ ಜೀವನವನ್ನು ಅನುಭವಿಸುವುದಕ್ಕಾಗಿ ಇಲ್ಲಿ ಜನ್ಮವೆತ್ತುತ್ತಾರೆಂದು ಗುರೂಜಿಯವರು ಕೂಡ ಹೇಳಿದ್ದರು.

ಸೂಕ್ಷ್ಮ ಪ್ರಯಾಣದ ಬಗ್ಗೆಯೂ ಮಾಸ್ಟರ್ ಡಸ್ಕೋಲಸ್ ತಿಳಿಸುತ್ತಾರೆ. ಈ ಭೂಮಿಯ ವಿಕಾಸದ ಮೇಲ್ವಿಚಾರಣೆ ನೋಡುವ ಉನ್ನತ ಬುದ್ಧಿಶಕ್ತಿಯ ಬಗ್ಗೆಯೂ ಅವರು ತಿಳಿಸುತ್ತಾರೆ. ಹೀಗೆ, ಆ ಪುಸ್ತಕದಲ್ಲಿ ಅವರು ಹೇಳಿರುವುದಕ್ಕೂ ಮತ್ತು ನಾವು ಗುರೂಜಿಯವರಿಂದ ಕೇಳಿರುವುದಕ್ಕೂ ಹೋಲಿಕೆಯಿದೆ. ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿರಬೇಕೆಂದು ಅವರು ಹೇಳುತ್ತಾರೆ. ಒಳ್ಳೆಯದನ್ನು ಕೂಡ ಹೇರಬಾರದು.

ಅವರು ಅತ್ಯಾಶ್ಚರ್ಯಕರ ಹೀಲಿಂಗ್‌ಗಳನ್ನು ಮಾಡಿದ್ದಾರೆ. ಅವರು ತತ್‌ಕ್ಷಣದಲ್ಲಿಯೇ ಅನೇಕರನ್ನು ಗುಣಪಡಿಸಿದ್ದಾರೆ. ಅವರು ಕೂಡ ಕರ್ಮಗಳು ಮತ್ತು ಚಕ್ರಗಳ ಬಗ್ಗೆ ಹೇಳುತ್ತಾರೆ. ಪರಿವರ್ತನೆ ಇಲ್ಲದಿದ್ದಾಗ ಹೀಲಿಂಗ್ ಕಷ್ಟವಾಗುವುದನ್ನು ಅಥವ ನಿಧಾನವಾಗುವುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಕೊನೆಗೆ ಹೀಲ್ ಆಗುವುದು ಕೃಪೆಯಿಂದಾಗಿಯೇ. ಪರಿವರ್ತನೆ ಈ ಕೃಪೆಯನ್ನು ಆಕರ್ಷಿಸುತ್ತದೆ. ದೇವರಿಂದ ಕೃಪೆಯನ್ನು ಪಡೆಯಲು ಮತ್ತು ಹೀಲಿಂಗ್ ಪ್ರಕ್ರಿಯೆ ಪ್ರಾರಂಭವಾಗಲು ಸಂಪೂರ್ಣ ಪರಿವರ್ತನೆಯೇನೂ ಬೇಕಾಗಿಲ್ಲ, ಪರಿವರ್ತನೆ ಪ್ರಾರಂಭವಾದರೂ ಸಾಕು ಎಂದು ನಾವಿಲ್ಲಿ ಅರ್ಥಮಾಡಿಕೊಂಡಿದ್ದೇವೆ.

ಮಾಸ್ಟರ್ ಡಸ್ಕಲಸ್ ಅವರು "ಎಲಿಮೆಂಟಲ್ಸ್" ಬಗ್ಗೆ ಸಾಕಷ್ಟು ಮಾಹಿತಿ ನೀಡಿದ್ದಾರೆ. ನಮ್ಮ "ಹೊಸ ಯುಗದ ವಾಸ್ತವಗಳು" ಪುಸ್ತಕದಿಂದ ಎಲಿಮೆಂಟಲ್ಸ್ ಬಗ್ಗೆ ಕೆಲವು ವಿಷಯಗಳನ್ನು ಆರಿಸಿಕೊಂಡಿದ್ದೇನೆ. ಪ್ರಾಸಂಗಿಕವಾಗಿ, ಮಾಸ್ಟರ್ ಡಸ್ಕಲಸ್ ಅವರು, ಹೀಲಿಂಗ್‌ಗಾಗಿ, ರಕ್ಷಣೆಗಾಗಿ ಮತ್ತು ಬೇರೆಯವರಿಗೆ ಸಹಾಯಮಾಡುವುದಕ್ಕಾಗಿ ಪ್ರಜ್ಞಾಪೂರ್ವಕವಾಗಿ ಎಲಿಮೆಂಟಲ್ಸ್‌ಗಳನ್ನು ಸೃಷ್ಟಿಸುವುದರ ಬಗ್ಗೆ ಮಾತನಾಡಿದ್ದಾರೆ. ನಾವಿಲ್ಲಿ ಹಾಗೆ ಮಾಡುವುದಿಲ್ಲ. ನಾವು ಬೇರೆ ರೀತಿಯಲ್ಲಿ ಹೀಲ್ ಮಾಡುತ್ತೇವೆ. ಹೀಲಿಂಗ್ ಚೈತನ್ಯಗಳನ್ನು ಕಳಿಸುವಾಗ, ಆ ವ್ಯಕ್ತಿ ಗುಣಹೊಂದುತ್ತಿದ್ದಾನೆಂಬ ಬಲವಾದ ಆಲೋಚನೆ ಮತ್ತು ಶುದ್ಧವಾದ ಉದ್ದೇಶವನ್ನು ನಾವು ಹೊಂದಿರಬೇಕೆಂದು ಗುರೂಜಿಯವರು ತಿಳಿಸಿದ್ದರು. ಗುಣಪಡಿಸುವ ಪರಿಶುದ್ಧವಾದ ಉದ್ದೇಶದೊಂದಿಗೆ ಬಲವಾದ ಆಲೋಚನೆಯು ತನ್ನದೇ ಆದ ಚೈತನ್ಯವಲಯವನ್ನು ಹೊಂದಿರುತ್ತದೆ, ಅದು ಹೀಲಿಂಗ್ ಚೈತನ್ಯದೊಂದಿಗೆ ಆ ವ್ಯಕ್ತಿಯನ್ನು ತಲುಪಿ ಅವನಿಗೆ ಸಹಾಯಮಾಡುತ್ತದೆ.

ನಿಶ್ಚಿತ ಉದ್ದೇಶದೊಂದಿಗೆ, ಬಲವಾದ ಒಂದು ಆಲೋಚನೆ ಅಥವ ಭಾವನೆಯು ಸೃಷ್ಟಿಸಬಹುದಾದ ಚೈತನ್ಯ ವಲಯ ಎಲಿಮೆಂಟಲ್ ಎಂದು ನಾವು ವಿವರಿಸಿದ್ದೇವೆ. ಎಲಿಮೆಂಟಲ್‌ಗೆ ಬುದ್ಧಿಶಕ್ತಿಯಿದೆ, ವೈಯಕ್ತಿಕತೆಯಿದೆ ಮತ್ತು ಇಚ್ಛಾಸ್ವಾತಂತ್ರ್ಯವಿದೆಯೆಂದು ಗುರೂಜಿಯವರು ತಿಳಿಸಿದ್ದಾರೆ.

ಬೇರೆಯವರನ್ನು ರಕ್ಷಿಸುವುದಕ್ಕಾಗಿ ಎಲಿಮೆಂಟಲ್ ಅನ್ನು ನಿರ್ಮಿಸುವುದರ ಬಗ್ಗೆ ಮಾಸ್ಟರ್ ಡಸ್ಕೋಲಸ್ ತಿಳಿಸುತ್ತಾರೆ, ಒಂದು ರಕ್ಷಾಕವಚವನ್ನು ನಿರ್ಮಿಸುವಂತೆ. ತಾಂತ್ರಿಕವಾಗಿ ಅವೆರಡೂ ಒಂದೇ ಅಲ್ಲದಿದ್ದರೂ, ಅವುಗಳಲ್ಲಿ ಸಾಮ್ಯತೆಗಳಿವೆ. ವ್ಯಕ್ತಿಯೊಬ್ಬನು ಬಹಳ ನಕಾರಾತ್ಮಕ ವ್ಯಕ್ತಿಯಾಗಿದ್ದರೆ, ಬದಲಾಗಲು ಇಷ್ಟಪಡದಿದ್ದರೆ, ಹೊಸ ಚೈತನ್ಯಗಳಿಗೆ ತೆರೆದುಕೊಳ್ಳದಿದ್ದರೆ, ಅವನ ರಕ್ಷಣೆಗೆಂದು ನಿರ್ಮಿಸಿರುವ ಎಲಿಮೆಂಟಲ್ ಕೆಲಸಮಾಡುವುದಿಲ್ಲವೆಂದು ಅವರು ಹೇಳಿರುವುದು ಬಹಳ ಸ್ವಾರಸ್ಯಕರವಾಗಿದೆ. ಅದು ಚೆದರಿ ಹೋಗುತ್ತದೆ. ನಾವು ನಕಾರಾತ್ಮಕ ಆಲೋಚನೆಗಳಿಗೆ ಆಶ್ರಯ ನೀಡಿದರೆ ಅವು ರಕ್ಷಾಕವಚದಲ್ಲಿ ರಂಧ್ರವನ್ನುಂಟುಮಾಡಿ ಅದು ಕಾರ್ಯನಿರ್ವಹಿಸದಂತೆ ಮಾಡಬಹುದೆಂದು ನಾವಿಲ್ಲಿ ಹೇಳುತ್ತೇವೆ.

ನಕಾರಾತ್ಮಕವಾಗಿ ಯೋಚಿಸುತ್ತಿದ್ದಾಗ ಮತ್ತು ಬೇರೆಯವರ ಬಗ್ಗೆ ನಕಾರಾತ್ಮಕ ಉದ್ದೇಶವನ್ನು ಹೊಂದಿದ್ದಾಗ ಕೂಡ ಎಲಿಮೆಂಟಲ್ಸ್ ಹುಟ್ಟಿಕೊಳ್ಳುತ್ತವೆಯೆಂದು ಗುರೂಜಿಯವರು ಹೇಳಿದ್ದರು. ಸಕಾರಾತ್ಮಕ ಯೋಚನೆಗಳಿಗೂ ಇದು ಅನ್ವಯಿಸುತ್ತದೆ. ವ್ಯಕ್ತಿಯೊಬ್ಬನಿಗೆ ಹಾನಿಯುಂಟುಮಾಡಲು ನಕಾರಾತ್ಮಕ ಎಲಿಮೆಂಟಲ್ ಅನ್ನು ಕಳುಹಿಸಿದಾಗ, ಹಾನಿಮಾಡಬೇಕೆ ಅಥವ ಮಾಡಬಾರದೆ ಎನ್ನುವುದನ್ನು ಆ ಎಲಿಮೆಂಟಲ್‌ನ ಬುದ್ಧಿಶಕ್ತಿಯೇ ನಿರ್ಧರಿಸುತ್ತದೆ. ವ್ಯಕ್ತಿಯು ಶುದ್ಧವಾದ ಸಕಾರಾತ್ಮಕ ವ್ಯಕ್ತಿಯಾಗಿದ್ದರೆ, ಈ ಎಲಿಮೆಂಟಲ್ ಅದನ್ನು ಹೇಗಾದರೂ ಗುರುತಿಸುತ್ತದೆ ಮತ್ತು ಅವನನ್ನು ಪ್ರವೇಶಿಸುವುದಿಲ್ಲ. ಇದು ಎಷ್ಟೊಂದು ಸ್ವಾರಸ್ಯವಾಗಿದೆ! ಬದಲಿಗೆ ಅದು ಬ್ರಹ್ಮಾಂಡದಿಂದ ಚೈತನ್ಯವನ್ನು ಸಂಗ್ರಹಿಸಿ ಹೆಚ್ಚು ಬಲಗೊಂಡು ಅದನ್ನು ಸೃಷ್ಟಿಸಿದವನ ಬಳಿಗೇ ಹಿಂದಿರುಗಿ ಹೋಗುತ್ತದೆ. ಬೇರೆಯವರಿಗೆ ಹಾನಿಯುಂಟುಮಾಡಬೇಕೆಂದುಕೊಂಡಿದ್ದಕ್ಕಿಂತಲೂ ಹೆಚ್ಚು ಅವನಿಗೇ ಹಾನಿಯುಂಟಾಗುತ್ತದೆ! ನಾವು ವಿಶ್ವಕ್ಕೆ ಕಳಿಸಿದ ಆಲೋಚನೆಗಳನ್ನು ಮತ್ತು ಭಾವನೆಗಳನ್ನು ಅದು ಹೇಗೋ ಅನೇಕ ಪಟ್ಟು ಹೆಚ್ಚಾಗಿ ಹಿಂದಿರುಗಿ ಪಡೆಯುತ್ತೇವೆಂದು ಗುರೂಜಿಯವರಿಂದ ಕೇಳಿದ್ದೇವೆ. ಸಕಾರಾತ್ಮಕವಾಗಿ ಮಾತ್ರವೇ ಆಲೋಚಿಸಬೇಕೆಂಬ ದೃಢ ನಿರ್ಧಾರವನ್ನು ತೆಗೆದುಕೊಂಡು ಅದಕ್ಕೆ ಜನರು ಹೇಗೆ ಸ್ಪಂದಿಸುತ್ತಾರೆಂದು ನಾವು ಗಮನಿಸಬಹುದು. ನಮಗೆ ಯಾವ ರೀತಿಯ ಅನುಭವವಾಗುತ್ತದೆ ಎನ್ನುವುದನ್ನೂ ಗಮನಿಸಬಹುದು. ಅದು ನಮ್ಮನ್ನು ಎಂದೆಂದಿಗೂ ಸಕಾರಾತ್ಮಕರಾಗಿರುವಂತೆ ಪ್ರೇರೇಪಿಸುತ್ತದೆ ಎನ್ನುವುದರ ಬಗ್ಗೆ ನನಗೆ ಸಂದೇಹವಿಲ್ಲ. ನಮ್ಮ ಒಳ್ಳೆಯತನ ಮತ್ತು ಶುದ್ಧತೆ ನಮ್ಮ ಸುತ್ತಲೂ ರಕ್ಷಾಕವಚವನ್ನು ಸೃಷ್ಟಿಸಿ ಈ ನಕಾರಾತ್ಮಕ ಚೈತನ್ಯಗಳು, ನಕಾರಾತ್ಮಕ ಎಲಿಮೆಂಟಲ್‌ಗಳು ಮುಂತಾದವುಗಳಿಂದ ನಮ್ಮನ್ನು ರಕ್ಷಿಸುತ್ತವೆಯೆಂದೂ ಗುರೂಜಿಯವರು ಹೇಳುತ್ತಿದ್ದರು.

ಎಲಿಮೆಂಟಲ್ ನಮ್ಮ ಬಳಿಗೆ ಬಂದರೆ, ಅದು ನಮಗೆ ಗೊತ್ತಾಗದಿದ್ದರೂ ಮಾಸ್ಟರ್‌ಗಳಿಗೆ ತಿಳಿಯುತ್ತದೆ. ಅದನ್ನವರು ಹೀರಿಕೊಳುತ್ತಾರೆ. ಅದರಿಂದ ಆ ವ್ಯಕ್ತಿಗೆ ಹಾನಿಯುಂಟಾಗುವುದು ಅವರಿಗೆ ಬೇಕಿಲ್ಲ. ಆ ರೀತಿಯ ಪ್ರೀತಿ ಅವರಲ್ಲಿದೆ. ಸ್ವಲ್ಪ ಸಮಯದವರೆಗೆ ಅವರು ಕಾಯಿಲೆ ಬೀಳಬಹುದು ಅಥವ ಅಸ್ವಸ್ಥರಾಗಬಹುದು. ಹಾನಿ ಮಾಡಬೇಕೆಂದು ಬಯಸಿದ್ದ ವ್ಯಕ್ತಿ ಪಾರಾಗುತ್ತಾನೆ, ಆದರೆ ಮಾಸ್ಟರ್‌ಗೆ ಹಾನಿಯುಂಟುಮಾಡಬೇಕೆಂದು ಬಯಸಿದ್ದಕ್ಕಾಗಿ ಅವನು ಕರ್ಮವನ್ನು ಸಂಗ್ರಹಿಸುತ್ತಾನೆ. ಅವನು ಅದರಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ.

ಒಬ್ಬ ವ್ಯಕ್ತಿಯ ಬಗ್ಗೆ ನಾವು ಆಳವಾಗಿ ಯೋಚಿಸಿದಾಗ ಅದು ಆ ವ್ಯಕ್ತಿಯನ್ನು ತಲುಪುತ್ತದೆ, ಆದರೆ ಇದು ಎಲಿಮೆಂಟಲ್ ಅಲ್ಲ. ಆದ್ದರಿಂದ ಆಲೋಚನೆಗಳೆಲ್ಲವೂ ಎಲಿಮೆಂಟಲ್ ಅಲ್ಲ. ಬಲಹೀನ ಆಲೋಚನೆಗಳು ಬೇಗನೆ ಚೆದುರಿಹೋಗುತ್ತವೆ. ನಮ್ಮ 'ಹೊಸಯುಗದ ವಾಸ್ತವಗಳು' ಪುಸ್ತಕದಲ್ಲಿ ಮತ್ತು ಮಾಸ್ಟರ್ ಡಸ್ಕೋಲಸ್ ಅವರ ಪುಸ್ತಕಗಳಲ್ಲಿ ಇಂತಹ ಅನೇಕ ವಿವರಗಳಿವೆ. ಅವುಗಳನ್ನು ಓದಿ ನಾವು ಹೆಚ್ಚು ಅರ್ಥಮಾಡಿಕೊಳ್ಳಬಹುದು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಭರವಸೆ

**ಕಾರ್ತಿಕ್; ಅನು: ಪಾಂಡುರಂಗ**

ನಾವೆಲ್ಲರೂ ನಮ್ಮ ಜೀವನದಲ್ಲಿ ಉನ್ನತ ಗುರಿಗಳನ್ನು ಹೊಂದಿದ್ದೇವೆ; ನಮ್ಮ ಸುಧಾರಣೆಯ ಧ್ಯೇಯವನ್ನು ಹೊಂದಿರುವ ಗುರಿಗಳು. ಯಾವಾಗಲೂ ನಾವು ಪ್ರಾರಂಭಿಸುವುದು ದೃಢತೆ ಮತ್ತು ಪ್ರಾಮಾಣಿಕತೆಯಿಂದ. ವಿಸ್ಮಯ ಮತ್ತು ಭರವಸೆ ನಮ್ಮ ಪ್ರಯತ್ನಗಳಿಗೆ ಮತ್ತಷ್ಟು ಪುಷ್ಟಿಯನ್ನು ಕೊಡುತ್ತವೆ. ನಮ್ಮ ಪ್ರಯಾಣ ಮುಂದುವರಿಯುತ್ತಿದ್ದಂತೆ, ಅನೇಕ ಕಷ್ಟದ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ. ಈ ಕಷ್ಟದ ಸಂದರ್ಭಗಳು ನಮ್ಮನ್ನು ನಮ್ಮ ಪ್ರಯತ್ನಗಳಿಂದ ವಿಚಲಿತರಾಗುವಂತೆ ಮಾಡಬಹುದು. ಒಂದು ವೇಳೆ ನಮ್ಮ ಸಂಕಲ್ಪ ದುರ್ಬಲವಾಗಿದ್ದರೆ, ಬಾಹ್ಯದ ಪರಿಸ್ಥಿತಿಗಳು ನಮ್ಮನ್ನು ಗೊಂದಲಗಳಿಗೆ ಸಿಲುಕಿಸುತ್ತವೆ. ನಿಲುಕದ ನಿರೀಕ್ಷೆಗಳು, ನಿಧಾನಗತಿಯ ಪ್ರಗತಿ ನಮ್ಮನ್ನು ಹತಾಶೆಗೆ ತಳ್ಳುತ್ತವೆ. ಕ್ರಮೇಣವಾಗಿ,ಗುರಿಯನ್ನು ಮುಟ್ಟಬೇಕೆಂಬ ನಮ್ಮ ನಂಬಿಕೆಯನ್ನೇ ಅಲುಗಾಡಿಸುತ್ತವೆ. ಆಗ ನಮ್ಮ ಹೋರಾಟ ಆರಂಭವಾಗುತ್ತದೆ.

ಕುಟುಂಬ, ಸಮಾಜ ಮತ್ತು ರಾಷ್ಟ್ರದ ಮಟ್ಟಗಳಲ್ಲಿ ನಾವು ಉನ್ನತ ಗುರಿಗಳನ್ನು ಹೊಂದಿದ್ದೇವೆ. ಈ ಸಮಯದಲ್ಲಿ ಎಲ್ಲ ಮಟ್ಟಗಳಲ್ಲಿಯೂ ಪ್ರಕ್ಷುಬ್ಧ ಸ್ಥಿತಿ ಇರುವುದನ್ನು ನೋಡುತ್ತಿದ್ದೇವೆ. ಇಡೀ ಮನುಕುಲವೇ ಕಷ್ಟಗಳನ್ನು ಎದುರಿಸುತ್ತಿದೆ. ಬಹಳಷ್ಟು ಜನರು ಅಸಹಾಯಕರಾಗಿದ್ದಾರೆ. ಒಂದು ವೇಳೆ ನಮ್ಮ ಮಿತಿಯನ್ನು ಮೀರಿ ಬೆಳೆಯದಿದ್ದರೆ, ಒಂದು ವೇಳೆ ದೀರ್ಘ ಸಮಯದವರೆಗೆ ಹೋರಾಡುತ್ತಲೇ ಇದ್ದರೆ, ಉನ್ನತ ಹಂತಗಳನ್ನು ಮುಟ್ಟಬೇಕೆಂಬ ನಮ್ಮ ಆತ್ಮದ ಆಸೆಯೇ ಕ್ಷೀಣಿಸುತ್ತಾ ಹೋಗುತ್ತದೆ. ಭರವಸೆ ದುರ್ಬಲವಾಗುತ್ತದೆ.

ಯಾರು ತಮ್ಮ ಜೀವನದ ತಿರುವು ರಸ್ತೆಗಳಲ್ಲಿ, ಆಧ್ಯಾತ್ಮಿಕತೆಯ ದಿಕ್ಕಿನೆಡೆಗೆ ತಿರುಗಿಕೊಳ್ಳುತ್ತಾರೋ, ಆಧ್ಯಾತ್ಮಿಕತೆ ಅವರನ್ನು ಯಾವತ್ತೂ ನಿರಾಸೆಗೊಳಿಸುವುದಿಲ್ಲ. ಸತ್ಯ ಮತ್ತು ಪ್ರೀತಿಗಳ ಆಧಾರದ ಮೇಲೆ ನಮ್ಮ ಗುರಿಗಳನ್ನು ವಿಸ್ತರಿಸಿಕೊಂಡಾಗ, ವಿಶ್ವ ಸಹಾಯ ಮಾಡುತ್ತದೆ. ಗುರೂಜಿಯವರೊಬ್ಬ ಮಾಸ್ಟರ್, ಅವರ ಮೂಲಕ ದೇವರು ಕೆಲಸ ಮಾಡುವುದನ್ನು ನೋಡಿದ್ದೇವೆ. ಋಷಿಗಳಿಂದ ಪಡೆದ ಯಥಾರ್ಥ ಜ್ಞಾನವನ್ನು ಹಂಚುವುದರ ಮೂಲಕ ಅವರು ಮಾರ್ಗದರ್ಶನ ಮಾಡಿದರು. ಜ್ಞಾನದ ಜೊತೆಗೆ ಅವರು ಉನ್ನತ ಚೈತನ್ಯಗಳು ಮತ್ತು ಪ್ರೀತಿಯನ್ನು ಸೇರಿಸುತ್ತಿದ್ದರು. ನಮ್ಮೊಳಗೆ ಒಂದು ಹೊಸ ಭರವಸೆ ಮತ್ತು ಜೀವನೋತ್ಸಾಹವನ್ನು ಪ್ರತಿಬಾರಿಯೂ ತುಂಬುತ್ತಿದ್ದರು. ಇವೆಲ್ಲವುಗಳಿಂದ ನಮಗೆ ಹೊಸ ದೃಷ್ಟಿಕೋನಗಳಿಂದ, ಹೊಸ ಹುಮ್ಮಸ್ಸಿನಿಂದ ಸ್ಪಷ್ಟತೆಯಿಂದ ನಮ್ಮ ಪ್ರಯಾಣವನ್ನು ಮುಂದುವರಿಸುವುದಕ್ಕೆ ಸಾಧ್ಯವಾಗಿದೆ.

ಗೊಂದಲ ಮತ್ತು ಹೋರಾಟಗಳ ಈ ಸಮಯದಲ್ಲಿ, ಗುರೂಜಿಯವರು, ಅವರು ಚಾನಲ್ ಮಾಡಿದ ಜ್ಞಾನ ಸಾಗರದ ಮೂಲಕ ಈಗಲೂ ಮನುಕುಲವನ್ನು ಮಾರ್ಗದರ್ಶಿಸುತ್ತಿದ್ದಾರೆ. ಸೂಕ್ಷ್ಮ ಮಟ್ಟದಲ್ಲಿ ಗುರೂಜಿ ಇನ್ನೂ ಹೆಚ್ಚಿನ ಕೆಲಸ ಮಾಡುವುದನ್ನು ಮುಂದುವರಿಸಿದ್ದಾರೆ. ಪ್ರಸಕ್ತ ಸಂದಿಗ್ಧ ಸಮಯದಲ್ಲಿ, ಗುರೂಜಿ ಭರವಸೆಯಾಗಿದ್ದಾರೆ. ಈ ಭರವಸೆ ಉತ್ತಮ ಜೀವನದ ದಿಕ್ಕಿನೆಡೆಗೆ ಸಾಗುವಂತೆ ಮಾಡಿದೆ. ಈ ಭರವಸೆ ಸುವರ್ಣ ಯುಗವನ್ನು ಸ್ಥಾಪಿಸುವುದರಲ್ಲಿ ಸಹಾಯ ಮಾಡುತ್ತದೆ. ■

## ಉದ್ದೇಶ ಸಾಕಾರಗೊಳ್ಳುತ್ತದೆ

**ಹೇಮಲತ ಪ್ರಮೋದ್; ಅನು: ಸುಧಾಕರ್**

ನಮ್ಮೆಲ್ಲರಂತೆಯೇ ಗುರೂಜಿಯವರು ಬದುಕಿದರು – ಸರ್ಕಾರಿ ಕಚೇರಿಯಲ್ಲಿ ಕೆಲಸಮಾಡಿದರು, ಸಂಸಾರವಿತ್ತು ಮತ್ತು ಅನೇಕ ಜವಾಬ್ದಾರಿಗಳಿದ್ದವು. ಕರೆ ಬಂದಾಗ, ತಮ್ಮಲ್ಲಿದ್ದ ಎಲ್ಲವನ್ನೂ ತೊರೆದು ಹೊರನಡೆದರು. ಅವರು ಬಹಳ ಅವಮಾನವನ್ನು ಎದುರಿಸಬೇಕಾಯಿತು. ಆ ಕಷ್ಟಗಳ ದಿನಗಳನ್ನು ಎದುರಿಸಲು, ಅವರ ಧೈರ್ಯ, ಸ್ಥೈರ್ಯ, ಸ್ಥಿರ ಸಂಕಲ್ಪ ಮತ್ತು ಬಹುಮುಖ್ಯವಾಗಿ ಋಷಿಗಳಲ್ಲಿ ಮತ್ತು ದೇವರಲ್ಲಿ ಅವರಿಗಿದ್ದ ದೃಢ ನಂಬಿಕೆ ಅವರಿಗೆ ಸಹಾಯಮಾಡಿತು.

ಸರಳವಾದ ಬಾಳನ್ನು ಸಾಗಿಸಲು ಸಾಕಷ್ಟು ಹಣವಿಲ್ಲದಿದ್ದಾಗಲೂ, ಅವರು ವಿಶ್ವಚೇತನ ಮಂದಿರ ಮತ್ತು ಬೇರೆ ಕಟ್ಟಡಗಳನ್ನು ಕಟ್ಟುವ ಕನಸನ್ನು ಕಾಣುವ ಸ್ಥೈರ್ಯ ತೋರಿದರು. ಋಷಿಗಳ ಈ ಕೇಂದ್ರವನ್ನು ಸ್ಥಾಪಿಸುವ ಮತ್ತು ತಪೋನಗರವನ್ನು ಮತ್ತೊಂದು ಶಂಬಲವನ್ನಾಗಿಸುವ ಅವರ ಗುರುವಿನ ಕನಸನ್ನು ಸಾಕಾರಗೊಳಿಸುವ ಅವರ ಬಲವಾದ ಇಚ್ಛೆ ಮತ್ತು ಬದ್ಧತೆಗಳಿಂದಾಗಿ ಇದು ಸಾಧ್ಯವಾಯಿತು. ಇಚ್ಛಿಸಿದ ನಂತರ ಈ ಗುರಿಯತ್ತ ಸಣ್ಣದಾದ ಆದರೆ ದೃಢವಾದ ಹೆಜ್ಜೆಗಳನ್ನಿಡುತ್ತಾ ಹೋದರು. ಅವರಲ್ಲಿ ಅತ್ಯಂತ ತಾಳ್ಮೆ, ಅವಿರತ ಯತ್ನ ಮತ್ತು ಎಂದಿಗೂ ನಿರಾಶೆ ಹೊಂದದ ವರ್ತನೆಗಳಿದ್ದವು. 'ಬೆಳಕಿಗೆ ಬಾಗಿಲುಗಳು' ಪುಸ್ತಕವು ಅಮರಾಜಿ ಮತ್ತು ಗುರೂಜಿಯವರ ಬದುಕಿನ ಬಗ್ಗೆಯಷ್ಟೇ ಅಲ್ಲ, ಅದು ಅವರು ಬೋಧಿಸಿದಂತೆಯೇ ಬಾಳಿದರು ಎನ್ನುವ ಪುರಾವೆಯೂ ಹೌದು.

"ಉದ್ದೇಶವನ್ನು ಹೊಂದಿ, ಅದಷ್ಟೇ ಸಾಕು," ಎಂದು ಗುರೂಜಿಯವರು ಆಗಾಗ್ಗೆ ಹೇಳುತ್ತಿದ್ದರು. ನಮ್ಮ ಬಹು ಪಾಲು ಜನರು ಸತ್ಯಯುಗ ಜನ್ಮತಾಳಲಿ ಎಂದು ಬಲವಾದ ಉದ್ದೇಶವನ್ನು ಹೊಂದಿದರೆ ಅದು ಸಂಭವಿಸುತ್ತದೆ, ಎಂದು ಕೂಡ ಅವರು ಹೇಳಿದ್ದರು. ಉದ್ದೇಶದಲ್ಲಿ ಅಷ್ಟೊಂದು ಬಲವಿರುವಿದಾದರೆ 'ತಪೋನಗರವನ್ನು ಮತ್ತೊಂದು ಶಂಬಲವನ್ನಾಗಿಸುವ' ಅವರ ಉದ್ದೇಶವನ್ನು ಬಲಗೊಳಿಸಲು ನಮ್ಮೆಲ್ಲರಿಗೂ ಸಾಧ್ಯವಿಲ್ಲವೇ? ನಾವು ಉದ್ದೇಶಿಸಬಹುದು, ನಂತರ ನಮ್ಮ ಆದ್ಯತೆಗಳನ್ನು ಪುನಸ್ಸಂಘಟನೆ ಮಾಡಿಕೊಳ್ಳುವುದು, ಕೆಲಸಕ್ಕೆ ನಮ್ಮನ್ನು ಮರುಬದ್ಧರನ್ನಾಗಿಸಿಕೊಳ್ಳುವುದು ಮತ್ತು ಮಾಸ್ಟರ್‌ಗಳನ್ನು ಮತ್ತು ಋಷಿಗಳನ್ನು ಬಿಡದೆ ಹಿಂಬಾಲಿಸುವುದು ಇವೆ ಮುಂತಾದ ಸಣ್ಣ ಸಣ್ಣ ಹೆಜ್ಜೆಗಳನ್ನಿಡಬಹುದು. ದಿನ ನಿತ್ಯದ ಬದುಕಿನಲ್ಲಿ ಪವಾಡಗಳನ್ನು ಸೃಷ್ಟಿಸಲು, "ನನ್ನ ಉದ್ದೇಶ ಸಾಕಾರಗೊಳ್ಳುತ್ತದೆ" ಎಂಬ ಪ್ರಮಾಣವನ್ನು ಹೇಳಿಕೊಳ್ಳಿ, ಎಂದು ಡಾ. ವೈನ್ ಡೈರ್ ಅವರು ತಮ್ಮ ಪುಸ್ತಕ "ರಿಯಲ್ ಮ್ಯಾಜಿಕ್"ನಲ್ಲಿ ಹೇಳಿದ್ದಾರೆ. ನಮ್ಮ ಕನಸುಗಳನ್ನು ಮತ್ತು ನಮ್ಮ ಮಾಸ್ಟರ್‌ಗಳ ಕನಸುಗಳನ್ನು ನಿಜವಾಗಿಸಿಕೊಳ್ಳಲು ನಾವಿದನ್ನು ಪ್ರಯತ್ನಿಸಬಹುದು. ಇದು ನಾವು, ಗುರೂಜಿಯವರಿಗೆ ಅವರ ಮಹಾಸಮಾಧಿಯ ದಿನದಂದು ಕೊಡಬಹುದಾದ ಅತ್ಯುತ್ತಮ ಕೊಡುಗೆಯೆಂದು ನಾನು ಭಾವಿಸುತ್ತೇನೆ. ■

# ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ನಾನು ಬೇರೆಯವರಿಗೆ ಯಾವ ರೀತಿಯಲ್ಲಿ ಒಳ್ಳೆಯ ಗುಣಗಳನ್ನು ಹರಡಬಹುದು?**

ಉ: ನೀವು ಬೆಳಕನ್ನು ಹರಡಿದಾಗ, ಸಹಜವಾಗಿಯೇ, ಎಲ್ಲ ಒಳ್ಳೆಯ ಗುಣಗಳು ಸಹ ಹರಡುತ್ತವೆ. ಬೆಳಕಿನಲ್ಲಿ ಎಲ್ಲವೂ ಇದೆ. ನೀವು ಬೆಳಕನ್ನು ಹರಡುವಾಗ ಅಥವಾ ಚಾನಲ್ ಮಾಡುವಾಗ, ಒಂದೊಂದೂ ಗುಣದ ಬಗ್ಗೆ ಯೋಚಿಸಬೇಕಾಗಿಲ್ಲ.

**ಪ್ರ: ಪರಿವರ್ತನೆ ಪ್ರಕ್ರಿಯೆಯಲ್ಲಿ ಕರ್ಮಗಳು ಅಡ್ಡಿ ಪಡಿಸುತ್ತವೆಯೇ?**

ಉ: ಇದು ವ್ಯಕ್ತಿಯನ್ನು ಅವಲಂಬಿಸಿರುತ್ತದೆ. ನಾವು ಧ್ಯಾನ ಮಾಡಲೇಬೇಕು ಮತ್ತು ಪರಿವರ್ತನೆ ಹೊಂದಲೇಬೇಕೆಂದು ನಿರ್ಧರಿಸಿಕೊಂಡಾಗ, ಸೃಷ್ಟಿಯ ಯಾವ ಶಕ್ತಿಯೂ ಮಧ್ಯ ಪ್ರವೇಶಿಸುವುದಿಲ್ಲ.

**ಪ್ರ: ನಮ್ಮ ಆಧ್ಯಾತ್ಮಿಕ ಬೆಳವಣಿಗೆಯನ್ನು ಯಾವ ಏಕೈಕ ಅಂಶವನ್ನಾಧರಿಸಿ ಮೌಲ್ಯ ಮಾಪನ ಮಾಡಿಕೊಳ್ಳಬಹುದು?**

ಉ: ನಾವು ಎಷ್ಟರ ಮಟ್ಟಿಗೆ ಪ್ರೀತಿಯನ್ನು ಅಭಿವ್ಯಕ್ತಗೊಳಿಸುತ್ತೇವೆ ಎನ್ನುವುದನ್ನಾಧರಿಸಿ.

**ಪ್ರ: ಒಬ್ಬ ಧ್ಯಾನಿ ಬೇರೆಯವರ ನಿರೀಕ್ಷೆಗಳ ಎತ್ತರಕ್ಕೆ ಜೀವಿಸಿರಬೇಕೆಂಬುದು ಏಕೆ ಮುಖ್ಯವಾಗಿರುತ್ತದೆ?**

ಉ: ನಾವು ಋಷಿಗಳ ಮಾರ್ಗದರ್ಶನದಲ್ಲಿ ಧ್ಯಾನ ಮಾಡುವವರು ಎಂದು ಹೇಳಿಕೊಳ್ಳುತ್ತೇವೆ, ಸಹಜವಾಗಿಯೇ ಜನರು ನಮ್ಮಿಂದ ವಿಶೇಷ ರೀತಿಯ ನಡವಳಿಕೆಯನ್ನು ನಿರೀಕ್ಷಿಸುತ್ತಾರೆ. ಒಬ್ಬ ನಿಜವಾದ ಧ್ಯಾನಿ ಯಾವಾಗಲೂ ಸಮಾಧಾನಿಯಾಗಿ ಇರುರುತ್ತಾನೆ, ಪ್ರಾಮಾಣಿಕನಾಗಿ ಇರುತ್ತಾನೆ ಮತ್ತು ಒಳ್ಳೆಯವನಾಗಿರುತ್ತಾನೆ. ನಾವು ಈ ಎಲ್ಲ ಗುಣಗಳನ್ನು ಹೊಂದಿರಬೇಕಾಗುತ್ತದೆ, ಹಾಗೇ ಬೇರೆಯವರ ನಿರೀಕ್ಷೆಗಳಂತೆ ನಾವು ಜೀವಿಸಬೇಕಾಗುತ್ತದೆ. ಇದು ಪ್ರದರ್ಶನದ ನಡತೆಯಾಗಿರಬಾರದು.

**ಪ್ರ: ನನ್ನ ಮನಸ್ಸು ಕುಗ್ಗಿದಾಗ, ನಾನು ಏನು ಮಾಡಲಿ?**

ಉ: ಬೆಳಕಿನ ಅನುಭವ ಪಡೆಯುವುದು ಅತ್ಯುತ್ತಮ. ಇದು ಸರಳವಾದ, ಬಹಳ ಸಹಜವಾದ, ಪ್ರಭಾವಶಾಲಿಯಾದ ಮತ್ತು ಯಾವುದೇ ದುಂದುವೆಚ್ಚವಿಲ್ಲದ ಮಾರ್ಗ. ಸುಮ್ಮನೆ ಬೆಳಕನ್ನು ಜ್ಞಾಪಿಸಿಕೊಂಡರೂ ಸಾಕು, ನೀವು ಬೆಳಕಿನ ಅನುಭವ ಪಡೆಯಬೇಕಿಲ್ಲ. ಆಗ ನೀವು ಎಲ್ಲ ರೀತಿಯ ಖಿನ್ನತೆಗಳಿಂದ, ಎಲ್ಲ ರೀತಿಯ ಕುಗ್ಗುವಿಕೆಗಳಿಂದ ಹೊರ ಬರುತ್ತೀರಿ.

**ಪ್ರ: ಮಾನಸ ಕುಟುಂಬದವರಿಗೆ ಮಾತ್ರ ಸೂಕ್ಷ್ಮ ಮಟ್ಟದ ತರಗತಿಗಳನ್ನು ನಡೆಸಲಾಗುತ್ತದೆಯೇ?**

ಉ: ಇಲ್ಲ. ಇಡೀ ಭೂಮಿಯಲ್ಲಿ ನಮಗೆ 1,44,000 ಕೇಂದ್ರಗಳಿವೆ. ಈ ಎಲ್ಲ ಕೇಂದ್ರಗಳಿಂದ ಜನರನ್ನು ಆಯ್ಕೆಮಾಡಿಕೊಳ್ಳಲಾಗುತ್ತದೆ ಮತ್ತು ಎಲ್ಲ ಜನರಿಗೂ ತರಗತಿಗಳನ್ನು ನಡೆಸಲಾಗುತ್ತದೆ.

**ಪ್ರ: ಸೂಕ್ಷ್ಮ ಮಟ್ಟದ ವ್ಯಕ್ತಿಗಳು ಮತ್ತು ಅಶರೀರ ಆತ್ಮಗಳಲ್ಲಿ ವ್ಯತ್ಯಾಸವಿದೆಯೆ?**

ಉ: ಯಕ್ಷ ಯಕ್ಷಿಣಿಯರಂತಹ ಸೂಕ್ಷ್ಮ ಮಟ್ಟದ ವ್ಯಕ್ತಿಗಳನ್ನು ನೇರವಾಗಿ ಸೃಷ್ಟಿಸಲಾಗುತ್ತದೆ. ದೇಹವನ್ನು ಬಿಟ್ಟು ಸೂಕ್ಷ್ಮ ದೇಹಗಳಲ್ಲಿ ಬದುಕುವವರು ಅಶರೀರ ಆತ್ಮಗಳು. ಈ ಅಶರೀರ ಆತ್ಮಗಳನ್ನು ಭೂತಗಳೆಂದೂ ಕರೆಯುತ್ತಾರೆ.

**ಪ್ರ: ನಮ್ಮ ಮನಸ್ಸಿನ ಜೊತೆಗೆ ಮಾತನಾಡಬಹುದೇ?**

ಉ: ಮಾತನಾಡಬಹುದು. ನಮ್ಮ ದೇಹ, ಮನಸ್ಸು, ಬುದ್ಧಿ ಹಾಗೂ ನಿರ್ಜೀವ ವಸ್ತುಗಳ ಜೊತೆಗೂ ನಾವು ಮಾತನಾಡಬಹುದು.

**ಪ್ರ: ಈ ವಿಶ್ವದಲ್ಲಿ ನಮ್ಮ ಪಾತ್ರವೇನು?**

ಉ: ದೇವರು ನಮಗೆ ಇಚ್ಛಾ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ. ನಾವು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತೇವೆಯೋ, ಅದೇ ನಮ್ಮ ಪಾತ್ರವಾಗಿರುತ್ತದೆ. ನಮ್ಮ ಪಾತ್ರ ಯಾವುದಾದರೂ ಆಗಬಹುದು.

**ಪ್ರ: ಆಧ್ಯಾತ್ಮಿಕ ನಿಯಮಗಳು ಎಲ್ಲರಿಗೂ ಸಮಾನವಾಗಿ ಅನ್ವಯಿಸುತ್ತವೆಯೇ?**

ಉ: ಕೆಲವು ಸಾರ್ವತ್ರಿಕ ನಿಯಮಗಳು ಸೃಷ್ಟಿಯ ಯಾವುದೇ ಭಾಗದಲ್ಲಿಯೂ ಸಮಾನವಾಗಿ ಅನ್ವಯಿಸುತ್ತವೆ. ಉದಾಹರಣೆಗೆ: ಸತ್ಯದ ನಿಯಮಗಳು. ಒಬ್ಬ ವ್ಯಕ್ತಿ ಎಲ್ಲೇ ಇರಲಿ, ಯಾವ ಸಮಯದಲ್ಲಿಯೇ ಆಗಲಿ, ಸತ್ಯವಂತನಾಗಿರಬೇಕು. ಕರ್ಮದಂತಹ ಕೆಲವು ನಿಯಮಗಳು ಪ್ರತಿಯೊಬ್ಬರಿಗೂ ಅನ್ವಯಿಸುವುದಿಲ್ಲ – ಕಾರಣ ನಾವೆಲ್ಲರೂ ಬೇರೆ ಬೇರೆ ಮೂಲಗಳಿಂದ ಬಂದಿದ್ದೇವೆ; ಅವುಗಳಿಗೆ ತಮ್ಮದೇ ಆದ ರೀತಿನೀತಿಗಳಿರುತ್ತವೆ. ನಾವು ಅವುಗಳಿಗೆ ಬದ್ಧರಾಗಿರುತ್ತೇವೆ. ಪ್ರಾಣಿಗಳು, ಗಿಡ ಮರಗಳಿಗೆ ಇವಾವುದೇ ನಿಯಮಗಳು ಅನ್ವಯಿಸುವುದಿಲ್ಲ.


**ಪ್ರ: ಯಾವುದೇ ಪ್ರಯತ್ನವಿಲ್ಲದೆ ಅದಾಗಿಯೇ ಜಾಗೃತಿ ಉಂಟಾಗುತ್ತದೆಯೇ?**

ಉ: ನಾವೆಲ್ಲರೂ ಜಾಗೃತಿಗೊಳ್ಳುವಂಥ ಸಾಮರ್ಥ್ಯವನ್ನು ಹೊಂದಿದ್ದೇವೆ. ನಾವು ಪ್ರಯತ್ನ ಮಾಡದಿದ್ದರೆ ಜಾಗೃತಗೊಳ್ಳುವುದಿಲ್ಲ. ಬಹುಶಃ ಈ ಪ್ರಗತಿಪರ ಸಮಯದಲ್ಲಿ ಜೀವಿಸುವುದಕ್ಕೆ ಸಾಧ್ಯವಾದರೆ, ಹೊಸದಾಗಿ ಬಿಡುಗಡೆಯಾಗುವ ಅಥವ ಲಭ್ಯವಿರುವ ಚೈತನ್ಯಗಳು ನಾವು ಜಾಗೃತಗೊಳ್ಳಲೇ ಬೇಕಾದಂಥ ಸ್ಥಿತಿಗತಿಗಳನ್ನು ಸೃಷ್ಟಿಸುತ್ತವೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಧ್ಯಾನದಲ್ಲಿ ನಾನು ಯಾವಾಗಲೂ ಒಳ್ಳೆಯ ಜಾಗಕ್ಕೆ ಪ್ರವಾಸ ಹೋಗುತ್ತಿರುವಂತೆ ಕಲ್ಪಿಸಿಕೊಳ್ಳುತ್ತೇನೆ, ಏಕೆಂದರೆ ನನಗೆ ಹುಷಾರಿಲ್ಲದ ಕಾರಣ ಕೆಲವು ವರ್ಷಗಳಿಂದ ಪ್ರಯಾಣ ಮಾಡಲಾಗುತ್ತಿಲ್ಲ. ಒಂದು ದಿನ ನಮಗೆ ಗೂಗಲ್‌ನಿಂದ ನಾವು ಪ್ರೇಗ್‌ಗೆ ಟ್ರಿಪ್ ಗೆದ್ದಿರುವುದಾಗಿ ದೂರವಾಣಿ ಕರೆ ಬಂದಿತು. ನನ್ನ ಯಜಮಾನರ ಕಂಪನಿ ಅದನ್ನು ಗೆದ್ದಿತ್ತು. ಇಬ್ಬರ ವಿಮಾನಯಾನದ ಖರ್ಚು ಹಾಗು ಹೊಟೆಲ್ ಖರ್ಚು ಭರಿಸುವುದಾಗಿ ತಿಳಿಸಿದ್ದರು. ಸದ್ಯದಲ್ಲೇ ನಾವು ಅಲ್ಲಿಗೆ ಹೋಗಲಿದ್ದೇವೆ. ಅಂದರೆ ನನ್ನ ಕನಸು ನನಸಾದಂತೆ. ಈಗ ಧ್ಯಾನದ ಬಗ್ಗೆ ಇರುವ ನನ್ನ ನಂಬಿಕೆ ಇನ್ನೂ ಹೆಚ್ಚಾಯಿತು.

ಧ್ಯಾನ ನನ್ನ ಜೀವನಕ್ಕೆ ಒಂದು ದಾರಿ ಹಾಗೂ ಗುರಿಯನ್ನು ಕೊಟ್ಟಿದೆ, ಬದುಕು ಹೆಚ್ಚು ಅರ್ಥಪೂರ್ಣವಾಗಿದೆ. ಪ್ರತಿನಿತ್ಯದ ಘಟನೆಗಳಿಂದ ನನ್ನ ಅಂತರಂಗದ ಶಾಂತಿ ವಿಚಲಿತವಾಗುವುದಿಲ್ಲ. ಯಾವುದೂ ಭಾರವೆನಿಸದೆ ಪ್ರತಿ ಸವಾಲನ್ನೂ ಧೈರ್ಯದಿಂದ ಎದುರಿಸುತ್ತೇನೆ. ನನ್ನನ್ನು ಪ್ರತಿ ಕ್ಷಣ ಮಾರ್ಗದರ್ಶಿಸುತ್ತಿರುವ ಋಷಿಗಳು ಹಾಗೂ ಗುರೂಜಿಯವರೊಂದಿಗೆ ಸಂಪರ್ಕದಲ್ಲಿ ಇರುವಂತೆನಿಸುತ್ತದೆ. ಅವರುಗಳಿಗೆ ನಾನು ಚಿರಋಣಿ. ಜೀವನದಲ್ಲಿ ಎಷ್ಟೆಲ್ಲ ಸವಾಲುಗಳಿದ್ದರೂ ನಾನು ಸಕಾರಾತ್ಮಕವಾಗೇ ಇರುತ್ತೇನೆ.

– ಪಾಯಲ್ ವರ್ಮ

ಧ್ಯಾನದಲ್ಲಿ ನನ್ನ ಎಲ್ಲಾ ಚಕ್ರಗಳೂ ಸಕ್ರಿಯಗೊಂಡು ಚೈತನ್ಯವನ್ನು ಬಿಡುಗಡೆ ಮಾಡುತ್ತಿರುವ ಅನುಭವವಾಗುತ್ತದೆ. ಚಕ್ರದ ಪ್ರತಿಯೊಂದು ದಳವೂ ಚೈತನ್ಯವನ್ನು ಬಿಡುಗಡೆ ಮಾಡುತ್ತಿರುವ ಅನುಭವವಾಗುತ್ತದೆ. ಅನೇಕ ಸಲ ನನ್ನ ಮನೆಯಲ್ಲೇ ಒಬ್ಬ ಋಷಿ ಇರುವಂತೆನಿಸುತ್ತದೆ.

– ಸ್ವಪ್ನ ತೆಂಬೆ

ನನ್ನ ಸಾಕುನಾಯಿಯಾದ ಜಿಮ್ಮಿಗೆ ಒಂದು ಜಟಿಲವಾದ ಆಪರೇಷನ್ ಆಗಬೇಕಿತ್ತು. ಆಪರೇಷನ್‌ಗೆ ಮೊದಲು ನನ್ನ ನಾಯಿಗೆ, ವೈದ್ಯರಿಗೆ ಹಾಗೂ ಆಪರೇಷನ್‌ನಲ್ಲಿ ಬಳಸುವ ಉಪಕರಣಗಳಿಗೆ ಬೆಳಕನ್ನು ಕಳುಹಿಸಿ ಋಷಿಗಳಲ್ಲಿ ಪ್ರಾರ್ಥಿಸಿದೆ. ಆಶ್ಚರ್ಯವೆಂಬಂತೆ ಹೆಚ್ಚು ರಕ್ತಸ್ರಾವವಾಗದೆ ಆಪರೇಷನ್ ಸುಲಭವಾಗಿ ನಡೆಯಿತು. ವೈದ್ಯರಿಗೇ ಅಚ್ಚರಿಯಾಯಿತು. ಜಿಮ್ಮಿಗೆ ನೋವಿರಲಿಲ್ಲ, ಹುಷಾರಾಗಿತ್ತು. ಈಗ ಅದರ ಗಾಯ ಸಂಪೂರ್ಣವಾಗಿ ಗುಣಮುಖವಾಗಿದೆ. ಈ ಅನುಭವ ನನ್ನೊಡನೆ ಯಾವಾಗಲೂ ಇರುತ್ತದೆ.

– ಸತ್ವಜಯ ಥೋಕಲ್

ಕಳೆದ ಒಂದು ತಿಂಗಳಿನಲ್ಲಿ ನನ್ನ ಬಗ್ಗೆ ನಾನೇ ಹೆಚ್ಚು ತಿಳಿದುಕೊಂಡೆ. ಆತ್ಮಾವಲೋಕನ ಮಾಡಿಕೊಂಡಾಗ ನನ್ನಲ್ಲಿ ಅಸಂತೋಷ ಉಂಟುಮಾಡುತ್ತಿದ್ದ ಪ್ರತಿಯೊಂದು ಅಂಶದ ಬಗ್ಗೆಯೂ ನನಗೆ ಅರಿವುಂಟಾಯಿತು. ಆದರೆ ಅದನ್ನು ಒಪ್ಪಿಕೊಂಡು, ಅಹಂಬಿಟ್ಟು ಮುಂದುವರೆಯುವುದು ಬಹಳ ಕಷ್ಟದ್ದಾಗಿತ್ತು. ಗುರೂಜಿಯವರ ಆಶೀರ್ವಾದದಿಂದ ಮತ್ತು ನಿಮ್ಮ ಮಾರ್ಗದರ್ಶನದಿಂದ ಎಲ್ಲಾ ಪರೀಕ್ಷೆಗಳಲ್ಲೂ ಸಾಮಾನ್ಯ ಗುಣಮಟ್ಟದಲ್ಲಿ ತೇರ್ಗಡೆಯಾದೆ. ನನ್ನಲ್ಲಿ ಇನ್ನೂ ಹೆಚ್ಚಿನ ಬದಲಾವಣೆ ಆಗಬೇಕು.

– ಮೋಹನ್ ಚಂದ್ರಬಾಬು

ಈಗ ನಾನು ಬೆಳಕಿನ ಸಹಾಯದಿಂದ ನಿರ್ಭಯವಾಗಿ ಅತ್ಯಂತ ಸಂತೋಷದಿಂದಿದ್ದೇನೆ. ನಾನು ಸಂಪೂರ್ಣವಾಗಿ ದೇವರಿಗೆ ಮೊರೆಹೊಕ್ಕಿರುವುದರಿಂದ, ನಾನೀಗ ಆರಾಮವಾಗಿದ್ದೇನೆ. ಆ ಭಗವಂತ ನನಗೇನು ಬೇಕೋ ಎಲ್ಲವನ್ನು ಕೊಟ್ಟು ನನ್ನನ್ನು ರಕ್ಷಿಸುತ್ತಿದ್ದಾನೆ. ನಾನು ಈಗ ಬೆಳಕಿನೊಂದಿಗೆ ಸಂಪರ್ಕ ಹೊಂದಿ ಅನುಗ್ರಹಿತನಾಗಿದ್ದೇನೆ. ಪ್ರತಿಕ್ಷಣ ನಾನು ಕೃತಜ್ಞತಾಭಾವದಿಂದಲೇ ಜೀವಿಸುತ್ತಿದ್ದೇನೆ.

– ಅನು ಸೆಹಗಲ್

ನನಗೆ ವಿಸ್ತೃತ ಜೀವನದಲ್ಲಿ ಬದುಕಬೇಕೆಂಬ ಬಯಕೆಯಾಗುತ್ತಿದೆ. ಬರೀ ನನಗಾಗಿ ಮತ್ತು ನನ್ನ ಸಂಸಾರಕ್ಕಾಗಿ ಬಾಳುವುದು ಸಾಕೆನಿಸಿದೆ. ಈಗ ನಾನು ಎಲ್ಲರಿಗಾಗಿ ಬದುಕಬೇಕೆನಿಸಿದೆ. ಹೇಗೋ, ನಾನು ವಿಶ್ವಮಾನವನಾಗುವ ಕಡೆಗೆ ಪಯಣಿಸಲು ಪ್ರಾರಂಭಿಸಿದಂತೆ ಅನಿಸುತ್ತಿದೆ.

ಮಿಚಿಗನ್‌ನ ಸಮುದ್ರ ತಟದಲ್ಲಿ ನನಗೆ ಒಬ್ಬ ವೃದ್ಧ ಮಹಿಳೆಯ ಭೇಟಿಯಾಯಿತು. ಅವರು ಅಲ್ಲಿಗೆ ಗ್ರಹಣವನ್ನು ವೀಕ್ಷಿಸಲು ಬಂದಿದ್ದರು. ಬೈಬಲ್‌ನಲ್ಲಿ, ಏಸುಪ್ರಭುವನ್ನು ಶಿಲುಬೆಗೇರಿಸಿದ ದಿನದಂದೂ ಗ್ರಹಣವಿತ್ತೆಂಬ ವಿವರಣೆಯಿದೆಯೆಂದು ಆಕೆ ತಿಳಿಸಿದರು. ಆ ದಿನದ ನಿಶ್ಚಲತೆಯನ್ನು ಅಲ್ಲಿ ಅನುಭವಿಸುತ್ತಿರುವುದಾಗಿ ತಿಳಿಸಿದರು. ಅವರು ಅತ್ಯಂತ ಪ್ರೀತಿಯುಳ್ಳವರಾಗಿದ್ದರು. ನಾವು ಎಲ್ಲಿಯೇ ಇರಲಿ ನಮ್ಮ ಸುತ್ತಮುತ್ತ ಪ್ರೀತಿ ಹರಡುವ ಜನರು ಇರುವಂತೆ ಗುರೂಜಿಯವರು ನೋಡಿಕೊಳ್ಳುತ್ತಾರೆ. ಆ ಅನುಭವವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.

– ಪುಷ್ಕರ್ ಪಟ್ಕಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ